17 ಆಗಸ್ಟ್ 2025 ಭಾನುವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 159 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629

ಜನಮನದ ದನಿ

# ಪ್ರಜೋದಯ

ದಿನಪತ್ರಿಕೆ

ಸಂಪಾದಕ : ಜೆ.ಆರ್. ಕೆಂಚೇಗೌಡ



ಟಿ-20 ತಂಡದ ನಾಯಕ ಸೂರ್ಯಕುಮಾರ್ ಯಾದವ್ ಅವರು ಬಿಸಿಸಿಐ ಶ್ರೇಷ್ಠತಾ ಕೇಂದ್ರದ ಫಿಟ್ನೆಸ್ ಪರೀಕ್ಷೆಯಲ್ಲಿ ಶನಿವಾರ ತೇರ್ಗಡೆಯಾಗಿದ್ದಾರೆ ಅಜಿತ್ ಅಗರಕರ್ ನೇತೃತ್ವದ ಆಯ್ಕೆ ಸಮಿತಿ ಏಷ್ಯಾ ಕಪ್ ಟೂರ್ನಿಗೆ ಭಾರತ ತಂಡವನ್ನು ಆಯ್ಕೆ ಮಾಡಲು ಆ.19ರಂದು ಸಭೆ ಸೇರಲಿದೆ.



ಆಹಾರ ಸೇವಿಸುವ ಮುನ್ನ ಗಮನಿಸಿ ಈ ಆರನ್ನು... » 2



ಶಾಪದ ಅಗ್ನಿಕುಂಡದಲ್ಲಿ ಅರಳಿದ ಕೆಂಡಗಳು » 3



ದೇವದಾಸಿ ಪದ್ಧತಿ ನಿರ್ಮೂಲನೆಗೆ ಕಠಿಣ ಕ್ರಮ » 4

# ಮೇಯರ್ ಚಂದ್ರೇಗೌಡ ಸದಸ್ಯತ್ವ ರದ್ದು

## ಪ್ರಭಾರಿ ಹುದ್ದೆ ಅಲಂಕರಿಸಿದ ಹೇಮಲತಾ | ಕಾನೂನು ಹೋರಾಟದಲ್ಲಿ ಗೆದ್ದ ಜೆಡಿಎಸ್

• ಪ್ರಜೋದಯ ವರದಿ

**ಹಾಸನ:** ಪಕ್ಷದ ನಾಯಕರ ನಿರ್ಧಾರದ ವಿರುದ್ಧ ಸೆಡ್ಡು ಹೊಡೆದು ನಗರಪಾಲಿಕೆಯ ಮೇಯರ್ ಗಾದಿ ಗಿಟ್ಟಿಸಿಕೊಂಡಿದ್ದ ಎಂ.ಚಂದ್ರೇಗೌಡ ಅವರ ಸದಸ್ಯತ್ವವನ್ನು ಪಕ್ಷಾಂತರ ನಿಷೇಧ ಕಾಯ್ದೆ ಅನ್ವಯ ಮೈಸೂರು ಪ್ರಾದೇಶಿಕ ಆಯುಕ್ತರು ರದ್ದು ಪಡಿಸಿದ್ದಾರೆ.

ಜಿಲ್ಲಾಧಿಕಾರಿಯವರಿಗೆ ಪ್ರಾದೇಶಿಕ ಆಯುಕ್ತರ ಆದೇಶ ಪ್ರತಿ ರವಾನೆಗೊಂಡ ಬೆನ್ನಲ್ಲೇ ಶನಿವಾರ ಸಂಜೆ ನಗರಪಾಲಿಕೆಯ ಉಪ ಮೇಯರ್ ಜೆಡಿಎಸ್‌ನ ಶ್ರೀಮತಿ ಹೇಮಲತಾ ಕಮಲ್‌ಕುಮಾರ್ ಅವರು ಶಾಸಕ ಹೆಚ್.ಪಿ. ಸ್ವರೂಪ್ ಹಾಗು ಸದಸ್ಯರ ಸಮ್ಮುಖದಲ್ಲಿ ಪ್ರಭಾರಿ ಮೇಯರ್ ಆಗಿ ಅಧಿಕಾರ ವಹಿಸಿಕೊಂಡರು.

ಮಹಾನಗರ ಪಾಲಿಕೆ ಘೋಷಣೆಗೂ ಮೊದಲು ನಡೆದಿದ್ದ (ಏ.28) ನಗರಸಭೆ ಅಧ್ಯಕ್ಷರ ಚುನಾ ವಣೆಯಲ್ಲಿ ತಟಸ್ಥ ನಿಲುವು ತಾಳುವ ಮೂಲಕ ಚಂದ್ರೇಗೌಡ ಅವರು ಪಕ್ಷದ ವಿಪ್ ಉಲ್ಲಂಘಿಸಿದ್ದರು. ಅದನ್ನು ಪ್ರಶ್ನಿಸಿ ಜೆಡಿಎಸ್ ಪ್ರಾದೇಶಿಕ ಆಯುಕ್ತರ ನ್ಯಾಯಾಲಯದಲ್ಲಿ ದಾವೆ ಹೂಡಿತ್ತು.

ಒಪ್ಪಂದದಂತೆ ಆರು ತಿಂಗಳು ನಗರಸಭೆ ಅಧ್ಯಕ್ಷರಾಗಿದ್ದ ಚಂದ್ರೇಗೌಡ ನಂತರ ಸ್ಥಾನ ಬಿಟ್ಟುಕೊಡದೆ ಹಠಮಾರಿತನ ತೋರಿದ್ದರು.



### ಸದಸ್ಯತ್ವ ರದ್ದಾದದ್ದು ಗೊತ್ತೇ ಇರಲಿಲ್ಲ

ಹಾಸನ : ತಮ್ಮ ಸದಸ್ಯತ್ವ ರದ್ದಾದ ವಿಚಾರವು ಪ್ರಾದೇಶಿಕ ಆಯುಕ್ತರ ಕಾರ್ಯಾಲಯದಿಂದ ನಗರಸಭೆ ಕಚೇರಿ ತಲುಪುವ ತನಕವೂ ಮೇಯರ್ ಚಂದ್ರೇಗೌಡ ಅವರ ಗಮನಕ್ಕೆ ಬಂದಿರಲಿಲ್ಲ. ಆಗಸ್ಟ್ 14ರಂದು ನ್ಯಾಯಾಲಯದ ಆದೇಶ ಆಗಿತ್ತು. ಆಗಸ್ಟ್ 15ರಂದು ಸ್ವಾತಂತ್ರ್ಯ ದಿನಾಚರಣೆಯಲ್ಲಿ ಅಧಿಕಾರಿಗಳ ತಂಡದೊಂದಿಗೆ ಭಾಗಿಯಾಗಿದ್ದ ಮೇಯರ್ ಗಮನಕ್ಕೆ ಬಂದಿರಲಿಲ್ಲ. ಜೆಡಿಎಸ್ ಕೂಡ ಈ ವಿಚಾರವನ್ನು ಗೌಪ್ಯವಾಗಿಯೇ ಇಟ್ಟುಕೊಂಡಿತ್ತು. ಶನಿವಾರ ಬೆಳಿಗ್ಗೆ ಈ ಮಾಹಿತಿ ಇದ್ದ ಆಪ್ತರೊಬ್ಬರು ಮೇಯರ್ ಅವರಿಗೆ ಕರೆ ಮಾಡಿ ತಮ್ಮ ಸದಸ್ಯತ್ವ ರದ್ದಾಗಿರುವ ವಿಚಾರವನ್ನು ನೀಡಿದರೆನ್ನಲಾಗಿದೆ.

ಏ.28ರಂದು ನಡೆದಿದ್ದ ಅವಿಶ್ವಾಸ ನಿರ್ಣಯ ಸಭೆಯಲ್ಲಿ ಚಂದ್ರೇಗೌಡ ಅವಿಶ್ವಾಸ ಗೆದ್ದಿದ್ದರು. ಒಟ್ಟು 35 ಸದಸ್ಯ ಬಲ ಹೊಂದಿರುವ ಪಾಲಿಕೆಯಲ್ಲಿ ಜೆಡಿಎಸ್ ಬೆಂಬಲಿತ 17, ಬಿಜೆಪಿ 13, ಕಾಂಗ್ರೆಸ್‌ನ 2, ಮೂರು ಪಕ್ಷೇತರ ಸದಸ್ಯರಿದ್ದಾರೆ.

ಈ ವೇಳೆ ಮಾತನಾಡಿದ ಹೇಮಲತಾ ಅವರು, ನನಗೆ ಈ ಅವಕಾಶ » ನಾಲ್ಕನೇ ಪುಟದಲ್ಲಿ

### ಕೆವಿಯಟ್ ಸಲ್ಲಿಸಿದ ಜೆಡಿಎಸ್

ಆಗಸ್ಟ್ 14ರಂದು ಮೇಯರ್ ಸದಸ್ಯತ್ವ ರದ್ದಾದ ತಕ್ಷಣ ಜಾಗೃತರಾದ ಜೆಡಿಎಸ್ ನಾಯಕರು ತಮ್ಮ ವಕೀಲರ ಮೂಲಕ ಹೈಕೋರ್ಟ್‌ನಲ್ಲಿ ಕೆವಿಯಟ್ ಕೂಡ ಸಲ್ಲಿಸಿ ರುವುದರಿಂದ ತಕ್ಷಣಕ್ಕೆ ಮೈಸೂರು ಪ್ರಾದೇಶಿಕ ಆಯುಕ್ತರ ಆದೇಶಕ್ಕೆ ಕೋರ್ಟ್ ತಡೆಯಾಜ್ಞೆ ನೀಡುವ ಸಾಧ್ಯತೆಗಳಿಲ್ಲ. ಮೇಯರ್ ಚಂದ್ರೇಗೌಡ ಅವರು ಹೈಕೋರ್ಟ್ ನಲ್ಲಿ ಈ ತೀರ್ಪಿನ ವಿರುದ್ಧ ಏಕಪಕ್ಷೀಯವಾಗಿ ತಡೆಯಾಜ್ಞೆ ತರಬಹುದೆಂಬ ಲೆಕ್ಕಾಚಾರದಲ್ಲಿ ಜೆಡಿಎಸ್ ಕೆವಿಯಟ್ ಸಲ್ಲಿಸಿರುವುದರಿಂದ ಒಂದು ವೇಳೆ ಚಂದ್ರೇಗೌಡ ಅವರು ನ್ಯಾಯಾಲಯದ ಮೆಟ್ಟಿಲು ಏರಿದರೆ ನ್ಯಾಯಾಲಯವು ವಾದಿ-ಪ್ರತಿವಾದಿಗಳಿಗೆ ನೋಟೀಸ್ ಜಾರಿ ಮಾಡಿ ನಂತರ ಕಾನೂನಾತ್ಮಕ ಅಂಶಗಳನ್ನು ಪರಿಶೀಲಿಸಿ ತೀರ್ಮಾನಕ್ಕೆ ಬರಬೇಕಾಗುತ್ತದೆ. ಇನ್ನೂ ಮೇಯರ್ ಅವಧಿ 2 ತಿಂಗಳು ಮಾತ್ರ ಇರುವುದರಿಂದ ಮುಂದಿನ ಬೆಳವಣಿಗೆಗಳು ಏನಾಗಬಹುದು ಎಂಬ ಬಗ್ಗೆ ಕುತೂಹಲ ಇದ್ದೇ ಇರುತ್ತದೆ.

# ವಿಧಾನಸೌಧದಲ್ಲೂ ಬುರುಡೆ ಶೋಧ ಸಾಧ್ಯವೇ?

• ಪ್ರಜೋದಯ ವರದಿ

**ಸಕಲೇಶಪುರ:** ಅನಾಮಿಕ ಹೇಳಿದ ನೆಂದು ಧರ್ಮಸ್ಥಳದಲ್ಲಿ ತಲೆಬುರುಡೆ ಶೋಧನೆಗೆ ಮುಂದಾಗಿರುವ ಸರ್ಕಾರ ಮತ್ತೆ ಯಾರಾದರೂ ಹೇಳಿದರೆ ವಿಧಾನಸೌಧವನ್ನೂ ಅಗೆಯುತ್ತದೆಯೇ ಎಂದು ಶಾಸಕ ಎಸ್.ಆರ್. ವಿಶ್ವನಾಥ್ ಅವರು ಪ್ರಶ್ನಿಸಿದರು.

ಬೆಂಗಳೂರಿನಿಂದ ಧರ್ಮಸ್ಥಳ ವರೆಗೆ ಕೈಗೊಂಡಿದ್ದ ಧರ್ಮಸ್ಥಳ ಚಲೋ ಅಭಿಯಾನ ಅಂಗ ವಾಗಿ ಶನಿವಾರ ಪಟ್ಟಣದ ಕೆಂಪೇಗೌಡ ಪ್ರತಿಮೆ ಬಳಿ ಮಾತನಾಡಿ, ಸೋಮ ವಾರದ ಅಧಿವೇಶನದಲ್ಲಿ ಎಸ್‌ಐಟಿ ತನಿಖಾ ವರದಿ ಮಂಡಿಸಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ. ಧರ್ಮಸ್ಥಳದ ಬುಡಕ್ಕೆ ಕೈ ಹಾಕುವ ಕೆಲಸವನ್ನು ವಿಚಾರವಾದಿಗಳು ಮತ್ತು ಧರ್ಮ ವಿರೋಧಿಗಳು ಮಾಡುತ್ತಿದ್ದಾರೆ. ಇದು ರಾಜ್ಯ ಮತ್ತು ದೇಶದ ಕೋಟ್ಯಾಂತರ ಭಕ್ತರ ಭಾವನೆಗೆ ಧಕ್ಕೆ ತರುವ ಕೃತ್ಯ. ಮಂಜುನಾಥ ಸ್ವಾಮಿಯ ವಿರುದ್ಧ ಅಪಪ್ರಚಾರ ಮಾಡುವವರಿಗೆ ಸರ್ಕಾರದ ಶಿಕ್ಷೆ ಒಂದೆಡೆಯಾದರೆ ದೇವರ ಶಿಕ್ಷೆಯೂ ಖಚಿತವೆಂದರು.

ಶಾಸಕ ಸಿಮೆಂಟ್ ಮಂಜು ಅವರು ಮಾತನಾಡಿ, ಧರ್ಮಸ್ಥಳದ ವಿರುದ್ಧ ನಡೆಯುತ್ತಿರುವ ಅಪಪ್ರಚಾರ ಖಂಡನೀಯ. ಸೌಜನ್ಯ ಹತ್ಯೆಗೆ ನ್ಯಾಯ ದೊರಕಬೇಕೆಂಬುದು ಎಲ್ಲರ ಆಸೆ. ಆ ಬಾಲಕಿಯ ಹೆಸರಿನಲ್ಲಿ ಧರ್ಮಸ್ಥಳದ ಮೇಲೆ ಅಪಪ್ರಚಾರ ಮಾಡಿ ಹಿಂದೂಗಳ ಭಾವನೆಗೆ ಧಕ್ಕೆ ತರುವುದು ಎಷ್ಟು ಸರಿ ಎಂದು ಪ್ರಶ್ನಿಸಿದರು.



ಬಿಜೆಪಿ ತಾಲ್ಲೂಕು ಅಧ್ಯಕ್ಷ ವಳಲಹಳ್ಳಿ ಅಶ್ವಥ್, ನಗರಾಧ್ಯಕ್ಷ ಲೋಕೇಶ್, ಕಾಮನಹಳ್ಳಿ ರಾಜಕುಮಾರ್, ಯುವ ಮೋರ್ಚಾ ಅಧ್ಯಕ್ಷ ನಿಖಿಲ್, ಜಯಶಂಕರ್, ನವೀನ್ ಶೆಟ್ಟಿ, ಆಕಾಶ್ ಹಳ್ಳಿಗದ್ದೆ, ಲೋಕೇಶ್ ಬಾಳೆಗದ್ದೆ, ಸಂದೀಪ್, ಪ್ರವೀಣ್ ಪೈಂಟ್ ಮತ್ತಿತರರಿದ್ದರು.

## ಒಡಿಸ್ಸಾ ಕಾಂಗ್ರೆಸ್ ವೀಕ್ಷಕರಾಗಿ ಶ್ರೇಯಸ್ ಪಟೇಲ್



• ಪ್ರಜೋದಯ ವರದಿ

**ಹಾಸನ:** ಸಂಸದ ಶ್ರೇಯಸ್ ಪಟೇಲ್ ಅವರನ್ನು ಅಖಿಲ ಭಾರತೀಯ ಕಾಂಗ್ರೆಸ್ ಸಮಿತಿ ಯಿಂದ ಒಡಿಸ್ಸಾ ರಾಜ್ಯ ಕಾಂಗ್ರೆಸ್ ವೀಕ್ಷಕರಾಗಿ ನೇಮಕ ಮಾಡಲಾಗಿದೆ ಎಂದು ಎಐಸಿಸಿ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರು ಆದೇಶ ಹೊರಡಿಸಿದ್ದಾರೆ.


# ಆಸ್ಪತ್ರೆಗೆ ತೆರಳುವ ರಸ್ತೆ ಕಾಮಗಾರಿ ಪ್ರಾರಂಭ

## ಪ್ರಜೋದಯ ವರದಿಯಿಂದ ಎಚ್ಚೆತ್ತುಕೊಂಡ ಹಿಮ್ಸ್ ಅಧಿಕಾರಿಗಳು

• ಪ್ರಜೋದಯ ವರದಿ

**ಹಾಸನ:** ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ಹಿಮ್ಸ್) ಆಸ್ಪತ್ರೆಗೆ ತೆರಳುವ ಮುಖ್ಯ ದ್ವಾರದ ಬಳಿ ರಸ್ತೆ ನಿರ್ಮಾಣಕ್ಕೆ ಹಿಮ್ಸ್ ಮುಂದಾಗಿದೆ.

ಹಿಮ್ಸ್ ಆಸ್ಪತ್ರೆಗೆ ತೆರಳುವ ಮುಖ್ಯದ್ವಾರದ ಮುಂದಿರುವ ರಸ್ತೆ ಕೆಸರು ಮಯವಾಗಿದ್ದು, ರೋಗಿಗಳು-ಸಾರ್ವಜನಿಕರು, ವಾಹನ ಸವಾರರು ಸಂಚಾರಿಸಲು ಪರದಾಡುವ ಸ್ಥಿತಿ ನಿರ್ಮಾಣವಾಗಿತ್ತು. ಈ ಬಗ್ಗೆ ಜುಲೈ 29 ರಂದು ಪ್ರಜೋದಯ ಪತ್ರಿಕೆಯಲ್ಲಿ ಹಿಮ್ಸ್ ಆಸ್ಪತ್ರೆಗೆ ತೆರಳುವ ರಸ್ತೆ ಕೆಸರುಗುಂಡಿ ಎಂಬ ಶೀರ್ಷಿಕೆಯಡಿ ವಿಸ್ತೃತವಾದ ವರದಿ ಪ್ರಕಟಿಸಲಾಗಿತ್ತು. ವರದಿಯಿಂದ ಎಚ್ಚೆತ್ತುಕೊಂಡ ಹಿಮ್ಸ್ ಆಡಳಿತ ಮಂಡಳಿ ರಸ್ತೆ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಿದೆ. ಮೊದಲ ಹಂತವಾಗಿ ಚರಂಡಿ ನಿರ್ಮಾಣ ಕಾಮಗಾರಿ ನಡೆಯುತ್ತಿದೆ.



ಹಿಮ್ಸ್ ತುರ್ತು ನಿಗಾ ಘಟಕ್ಕೆ ಸಂಪರ್ಕ ಕಲ್ಪಿಸುವ ಈ ರಸ್ತೆ ನಿರ್ಮಾಣವಾದರೆ ಸಾಕಷ್ಟು ಜನರಿಗೆ ಅನುಕೂಲವಾಗಲಿದೆ. ಜೊತೆಗೆ ಪಾರ್ಕಿಂಗ್‌ಗೆ ಸೂಕ್ತ ವ್ಯವಸ್ಥೆ ಕಲ್ಪಿಸಬೇಕೆಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ. ಇದೇ ರಸ್ತೆಗೆ ಹೊಂದಿಕೊಂಡಂತೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಕೂಡ ನಿರ್ಮಾಣಗೊಳ್ಳುತ್ತಿರುವುದರಿಂದ ಎರಡು ಆಸ್ಪತ್ರೆಗಳಿಗೆ ತೆರಳಲು ರೋಗಿಗಳು ಮತ್ತವರ ಸಂಬಂಧಿಗಳಿಗೆ ಅನುಕೂಲ ವಾಗಲಿದೆ. ಆದಷ್ಟು ಬೇಗ ಕಾಮಗಾರಿ ಪೂರ್ಣಗೊಳಿಸುವಂತೆ ಆಗ್ರಹಿಸಿದ್ದಾರೆ.


## ಸೆ.10ಕ್ಕೆ ಜಿಲ್ಲಾಧಿಕಾರಿ ಭೇಟಿ ಭರವಸೆ | ಜನ ಸ್ಪಂದನ ಸಭೆಗೆ ಸಕಾರಾತ್ಮಕ ಸ್ಪಂದನೆ

# ಖರಾಬು ಜಾಗ ಪ್ಲಾಂಟೇಷನ್‌ಗೆ ಅಕ್ರಮವಾಗಿ ಖಾತೆ: ಸ್ಥಳೀಯರ ದೂರು

• ಪ್ರಜೋದಯ ವರದಿ

**ಹಾಸನ:** ಸಕಲೇಶಪುರ ತಾಲ್ಲೂಕಿನ ಕುರಬುತ್ತೂರು-ಹಡ್ಲಹಳ್ಳಿ ಗ್ರಾಮವನ್ನು ಕಂದಾಯ ಗ್ರಾಮವಾಗಿಸುವ ನಿಟ್ಟಿನಲ್ಲಿ ಸೆ.10ರಂದು ಸ್ಥಳಕ್ಕೆ ಭೇಟಿ ನೀಡಿ ಮುಂದಿನ ಕ್ರಮ ಕೈಗೊಳ್ಳಲಾಗುವುದೆಂದು ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಅವರು ಹೇಳಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಶನಿವಾರ ಏರ್ಪಡಿಸಿದ್ದ ಜನ ಸ್ಪಂದನ ಸಭೆಯಲ್ಲಿ ಗ್ರಾಮಸ್ಥರ ಮನವಿ ಸ್ವೀಕರಿಸಿ ಮಾತನಾಡಿದ ಅವರು, ಈ ರೀತಿಯ ಸಮಸ್ಯೆಗಳು ಬಂದಾಗ ಖುದ್ದಾಗಿ ಸ್ಥಳಕ್ಕೆ ಭೇಟಿ ನೀಡಬೇಕಾಗುತ್ತದೆ. ಕಂದಾಯ ಗ್ರಾಮವಾಗಿಸುವ ಕುರಿತು ಇರುವ ಸಾಧ್ಯತೆ ಮತ್ತು ಕಾನೂನು ಪರಿಶೀಲಿಸಲಾಗುವುದು. ಜೊತೆಗೆ ಅಧಿಕಾರಿಗಳನ್ನು ಕರೆದುಕೊಂಡು ಬರುವುದಾಗಿ ಭರವಸೆ ನೀಡಿದರು.



**ಗ್ರಾಮಸ್ಥರ ವಾದ ಏನು**

ಕೇವಲ ಒಂದು ಕುಟುಂಬಕ್ಕೆ 28 ಎಕರೆ ಜಮೀನು ಪ್ಲಾಂಟೇಷನ್‌ಗೆ ಖಾತೆ ಮಾಡಿಕೊಡಲಾಗಿದೆ. 1920ರಲ್ಲಿ 20 ಎಕರೆಯನ್ನು ಪ್ಲಾಂಟೇಷನ್‌ಗೆ ಪಹಣಿ ಮಾಡಿಕೊಡಲಾಗಿತ್ತು. 1965ರಲ್ಲಿ ಉಳಿದ 8 ಎಕರೆಯನ್ನು ಅದೇ ಕುಟುಂಬದ ಮತ್ತೊಬ್ಬರಿಗೆ ಖಾತೆ ಮಾಡಿಕೊಡಲಾಗಿದೆ. ಅದರಿಂದ ಸುತ್ತಲಿನ ನಾಲ್ಕು ಗ್ರಾಮಸ್ಥರಿಗೆ ತೊಂದರೆಯಾಗುತ್ತಿದೆ ಎಂದರು.

**ಶೌಚಾಲಯ ನಿರ್ವಹಣೆಗೆ ಮನವಿ**

ಕ್ಲೀನ್ ಅಂಡ್ ಗ್ರೀನ್ ಹಾಸನ ಫೌಂಡೇಶನ್ ಪದಾಧಿಕಾರಿಗಳು ಮಾತನಾಡಿ, ನಗರದಲ್ಲಿ 7 ಸಾರ್ವಜನಿಕ ಶೌಚಾಲಯಗಳಿದ್ದರೂ ಯಾವುದು ಸುಸ್ಥಿತಿಯಲ್ಲಿಲ್ಲ. ಜಿಲ್ಲಾ ಕ್ರೀಡಾಂಗಣ ಸಮೀಪ ಶೌಚಾಲಯ ನಿರ್ವಹಣೆ ಇಲ್ಲದ ಪರಿಣಾಮ ವೃದ್ಧರಿಗೆ ತೊಂದರೆಯಾಗುತ್ತಿದೆ. ಮಹಾನಗರ ಪಾಲಿಕೆಗೆ ಸಾಕಷ್ಟು ಸಲ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ. ಜಿಲ್ಲಾ ನ್ಯಾಯಾಲಯ ಆವರಣದಲ್ಲಿ ಸಾರ್ವಜನಿಕ ಶೌಚಾಲಯ ನಿರ್ಮಾಣಕ್ಕೆ ಜಾಗ ಮೀಸಲಿಟ್ಟು ಹೈಕೋರ್ಟ್‌ನಿಂದ ಅನುಮತಿ ಪಡೆದಿದ್ದರೂ ಕ್ರಮ ಕೈಗೊಂಡಿಲ್ಲವೆಂದು ಆರೋಪಿಸಿದರು.

ಕಳೆದ ಬಾರಿ ಜನ ಸ್ಪಂದನ ಸಭೆಯಲ್ಲಿ ಸಲ್ಲಿಕೆಯಾದ ಅರ್ಜಿಗಳ ವಿಲೇವಾರಿ ಎಷ್ಟಾಗಿದೆ ಎಂಬುದರ ಮಾಹಿತಿಯನ್ನು ಎಲ್ಲಾ ಅಧಿಕಾರಿಗಳು ನೀಡಬೇಕು. ಪ್ರತಿ ತಿಂಗಳು ನಡೆಯುವ ಈ ಸಭೆ ಕಾಟಾಚಾರಕ್ಕೆ ಎಂಬಂತಾಗಬಾರದು. ಸಾರ್ವಜನಿಕರ ಹಿತದೃಷ್ಟಿಯಿಂದ ಅಧಿಕಾರಿಗಳು ಎಚ್ಚರಿಕೆಯಿಂದ ಕೆಲಸ ಮಾಡಬೇಕು.
-ಕೆ.ಎಸ್. ಲತಾಕುಮಾರಿ, ಜಿಲ್ಲಾಧಿಕಾರಿ

ಜಿಲ್ಲಾಧಿಕಾರಿ ಕೆ.ಎಸ್.ಲತಾ ಕುಮಾರಿ ಅವರು ಮಾತನಾಡಿ, ಪೌರಾಯುಕ್ತ ಕೃಷ್ಣಮೂರ್ತಿ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಬೇಕು. ಏಳು ಸಾರ್ವಜನಿಕ ಶೌಚಾಲಯಕ್ಕೂ ಪ್ರತ್ಯೇಕ ನೋಡಲ್ ಅಧಿಕಾರಿ ನೇಮಿಸಿ ನಿಗಾ ವಹಿಸಬೇಕು. ಬರುವ ಬುಧವಾರ ನಾನು ನಗರ ಪ್ರದಕ್ಷಿಣೆ » ನಾಲ್ಕನೇ ಪುಟದಲ್ಲಿ

# ಧರ್ಮಸ್ಥಳ ಅಪಪ್ರಚಾರದ ವಿರುದ್ಧ ರ‍್ಯಾಲಿ

## ನಗರದಲ್ಲಿ ಸ್ವಾಗತ: 400ಕ್ಕೂ ಹೆಚ್ಚು ವಾಹನಗಳಲ್ಲಿ ಬಿಜೆಪಿ ಕಾರ್ಯಕರ್ತರು ಭಾಗಿ

• ಪ್ರಜೋದಯ ವರದಿ

**ಹಾಸನ:** ಧರ್ಮಸ್ಥಳ ಕ್ಷೇತ್ರದ ವಿರುದ್ಧ ಅಪಪ್ರಚಾರ ಮಾಡುತ್ತಿರುವುದನ್ನು ಖಂಡಿಸಿ ನಡೆಯುತ್ತಿರುವ ಬಿಜೆಪಿ ರ‍್ಯಾಲಿಗೆ ನಗರದಲ್ಲಿ ಶನಿವಾರ ಸ್ವಾಗತ ಕೋರಲಾಯಿತು.

ಬೂವನಹಳ್ಳಿ ಬೈಪಾಸ್‌ನಲ್ಲಿ ಮಹಿಳೆಯರು, ಬಿಜೆಪಿ ಕಾರ್ಯಕರ್ತರು ಆರತಿ ಬೆಳಗಿ, ಪಟಾಕಿ ಸಿಡಿಸಿ ಬರಮಾಡಿಕೊಂಡರು. ಈ ವೇಳೆ ಧರ್ಮಸ್ಥಳದೊಂದಿಗೆ ನಾವಿದ್ದೇವೆ ಎಂಬ ಘೋಷಣೆ ಕೂಗಿದರು. ಶಾಸಕ ಎಸ್. ಆರ್.ವಿಶ್ವನಾಥ್ ನೇತೃತ್ವದಲ್ಲಿ ಸಾಗಿದ ರ‍್ಯಾಲಿಯಲ್ಲಿ 400ಕ್ಕೂ ಹೆಚ್ಚು ವಾಹನಗಳಲ್ಲಿ ಬಿಜೆಪಿ ಕಾರ್ಯಕರ್ತರು ಭಾಗಿಯಾಗಿದ್ದರು. ನೆಲ ಮಂಗಲ-ಕುಣಿಗಲ್ ರಸ್ತೆಯ ಕುಣಿಗಲ್ ಟೋಲ್‌ನಿಂದ ಯಾತ್ರೆ ಆರಂಭ ಗೊಂಡಿತ್ತು.



ಹಾಸನದಿಂದ ಸಕಲೇಶ ಪುರದ ಮೂಲಕ ಶಿರಾಡಿಘಾಟ್ ರಸ್ತೆ ಮಾರ್ಗವಾಗಿ ಧರ್ಮಸ್ಥಳಕ್ಕೆ ತೆರಳಿತು.

**ಅಪಪ್ರಚಾರ, ಷಡ್ಯಂತ್ರಕ್ಕೆ ಖಂಡನೆ**

ಶಾಸಕ ಎಸ್.ಆರ್.ವಿಶ್ವನಾಥ್ ಅವರು ಮಾತನಾಡಿ, ಧರ್ಮಸ್ಥಳದ ವಿರುದ್ಧ ನಡೆಯುತ್ತಿರುವ ಅಪಪ್ರಚಾರ ಮತ್ತು ಷಡ್ಯಂತ್ರವನ್ನು ತೀವ್ರವಾಗಿ ಖಂಡಿಸುತ್ತೇನೆ. ಸೌಜನ್ಯ ಪ್ರಕರಣದ ತನಿಖೆಗೆ ಯಾವುದೇ ವಿರೋಧವಿಲ್ಲದೆ, ಸರ್ಕಾರ ಕೈಗೊಂಡಿರುವ ತನಿಖೆಯನ್ನು ಸ್ವಾಗತಿಸುತ್ತೇವೆ.

ಧರ್ಮಸ್ಥಳದ ಮೇಲೆ ನಿರಂತರ ಅಪಪ್ರಚಾರದ ಹಿನ್ನಲೆ ಎಸ್‌ಐಟಿ ತನಿಖೆ ಅಗತ್ಯವಿತ್ತು. ಅನಾಮಿಕನ ಹೇಳಿಕೆಯನ್ನು ನಂಬಿ ಸರ್ಕಾರ ತಪ್ಪು ಮಾಡಿತ್ತು. ಆದರೆ, ಈಗ ಅರಿತುಕೊಂಡಿದೆ. ಅಧಿವೇಶನದಲ್ಲಿ ಸೋಮವಾರ ತನಿಖಾ ವರದಿ ಮಂಡಿಸಬೇಕು. ಅನಾಮಿಕನನ್ನು ಮೊದಲು ಮಂಪರು ಪರೀಕ್ಷೆ ಮಾಡಲಿ, ಅವನು ಸುಳ್ಳು ಹೇಳಿದ್ದರೆ ಆತನ ಮೇಲೂ ಕ್ರಮ ಕೈಗೊಳ್ಳಬೇಕು.
-ಎಸ್.ಆರ್.ವಿಶ್ವನಾಥ್, ಶಾಸಕ

ಧರ್ಮಸ್ಥಳದ ಬುಡಕ್ಕೆ ಕೈ ಹಾಕುವ ಕೆಲಸ ನಡೆಯುತ್ತಿದೆ. ಮಂಜುನಾಥ » ನಾಲ್ಕನೇ ಪುಟದಲ್ಲಿ

## ಕುಮಾರ ಚಂದ್ರಶೇಖರ ಶ್ರೀ ನಿಧನ



**ಬೆಂಗಳೂರು:** ವಿಶ್ವ ಒಕ್ಕಲಿಗರ ಮಹಾ ಸಂಸ್ಥಾನ ಮಠದ ಪೀಠಾಧ್ಯಕ್ಷ ಕುಮಾರ ಚಂದ್ರಶೇಖರನಾಥ ಸ್ವಾಮೀಜಿ ಶುಕ್ರವಾರ ತಡರಾತ್ರಿ 12.01ಕ್ಕೆ ನಿಧನರಾದರು.

ಅವರು ವಯೋಸಹಜ ಅನಾರೋಗ್ಯ ಸಮಸ್ಯೆ ಎದುರಿಸುತ್ತಿದ್ದರು. ಮಠದ ಉತ್ತರಾಧಿಕಾರಿ ಪೀಠಾಧ್ಯಕ್ಷ ನಿಶ್ಚಲಾನಂದನಾಥ ಸ್ವಾಮೀಜಿ ಅಂತ್ಯ ಸಂಸ್ಕಾರ ವಿಧಿ ವಿಧಾನ ನೆರವೇರಿಸಿದರು. ನಿಧನರಾದ ಕುಮಾರ ಚಂದ್ರ ಶೇಖರನಾಥ ಸ್ವಾಮೀಜಿ ಅವರಿಗೆ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ, ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಸೇರಿ ಅನೇಕರು ಸಂತಾಪ ಸೂಚಿಸಿದ್ದಾರೆ.

# ಅಡಿಕೆ ಬೊಮ್ಮನಹಳ್ಳಿ ಏತನೀರಾವರಿ ನಾಲೆಗೆ ನೀರು ಬಿಡುಗಡೆ

## ಬಾಕಿ 34 ಕೋಟಿ ರೂ. ಭೂಸ್ವಾಧೀನ ಹಣ ಬಿಡುಗಡೆಗೆ ಕ್ರಮ-ಶಾಸಕ ಎ.ಮಂಜು

• ಪ್ರಜೋದಯ ವರದಿ

**ಅರಕಲಗೂಡು:** ಅಡಿಕೆ ಬೊಮ್ಮನಹಳ್ಳಿ ಏತನೀರಾವರಿ ಯೋಜನೆಗೆ ಭೂಸ್ವಾಧೀನವಾಗಿರುವ 359 ಎಕರೆ ಪ್ರದೇಶ ಪೈಕಿ ಈಗಾಗಲೇ 169 ಎಕರೆಗೆ 1.41 ಕೋಟಿ ರೂ. ಪರಿಹಾರ ನೀಡಿದ್ದು, ಬಾಕಿ 120 ಎಕರೆಯ 34 ಕೋಟಿ ರೂ. ಬಾಕಿ ಇದ್ದು, ಸರ್ಕಾರದೊಂದಿಗೆ ಮಾತುಕತೆ ನಡೆಸಿ ಪರಿಹಾರ ಕೊಡಿಸುವ ಕೆಲಸವನ್ನುಮಾಡಲಾಗುವುದೆಂದು ಶಾಸಕ ಎ.ಮಂಜು ಅವರು ತಿಳಿಸಿದರು.

ತಾಲ್ಲೂಕಿನ ಅಡಿಕೆಬೊಮ್ಮನಹಳ್ಳಿ ಏತನೀರಾವರಿ ಯೋಜನೆ ಕಾಲುವೆಗೆ ಶನಿವಾರ ನೀರು ಹರಿಸುವ ಕಾರ್ಯಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಈ ಯೋಜನೆ ವ್ಯಾಪ್ತಿಯಲ್ಲಿನ ಬಾಕಿ 23 ಗ್ರಾಮಗಳ ವಿಸ್ತೀರ್ಣ 120 ಎಕರೆ ಪ್ರದೇಶಕ್ಕೆ ಅನುದಾನ ಬಿಡುಗಡೆಯಾಗಬೇಕಿದೆ. 51 ಎಕರೆ ವಿಸ್ತೀರ್ಣಕ್ಕೆ 24.80 ಕೋಟಿ ರೂ. ಬಿಡುಗಡೆಯಾದರೆ 8 ಗ್ರಾಮಗಳ ಇಂಡಿಕರಣ ವಾಗುತ್ತದೆ ಎಂದರು.

ಈ ಯೋಜನೆ ವ್ಯಾಪ್ತಿಯಲ್ಲಿ ಬರುವ 8,500 ಎಕರೆ ಅಚ್ಚುಕಟ್ಟು ನಿಗದಿಯಾಗಿದ್ದು, ಈ ಪೈಕಿ 6,987 ಎಕರೆ ಪ್ರದೇಶಕ್ಕೆ ನೀರು ಹರಿಯಲಿದೆ. 20 ಕಿಮೀ ನಾಲಾ ವ್ಯಾಪ್ತಿ ಇದ್ದು, ಬಾಕಿ 5.5 ಕಿಮೀ ಕಾಮಗಾರಿ ಆಗಬೇಕಿದೆ. ಪ್ರದೇಶದಲ್ಲಿ ರೈತರು ಅರೆನೀರಾವರಿ ಬೆಳೆಗಳನ್ನು ಕೈಗೊಳ್ಳು ವುದು ಸೂಕ್ತವಾಗಿದೆ. ಭತ್ತ ಬೆಳೆಯಿಂದ ಹೆಚ್ಚಿನ ಆರ್ಥಿಕಲಾಭ ಗಳಿಸಲು ಸಾಧ್ಯವಿಲ್ಲ. ಬದಲಾಗಿ ಕಡಿಮೆ ನೀರು ಬಳಕೆ, ವೆಚ್ಚದಲ್ಲಿ ಕೈಗೊಳ್ಳುವ ಬೆಳೆಗಳನ್ನು ಮಾಡಿ ಸಬಲರಾಗಬೇಕೆಂದು ಸಲಹೆ ನೀಡಿದರು.



ಸರ್ಕಾರ ನಿಗದಿ ಯೋಜನೆಗಳಿಗೆ ಸೀಮಿತಗೊಂಡಿದ್ದ ಅನುದಾನವನ್ನು ಇತರೆ ಕಾರ್ಯಕ್ರಮ ಗಳಿಗೆ ಬಳಕೆ ಮಾಡಿಕೊಳ್ಳುತ್ತಿರುವ ಪರಿಣಾಮ ಬಾಕಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ಆಗುತ್ತಿಲ್ಲ. ಇತ್ತೀಚೆಗೆ ಅನುದಾನ ಕೊಡುವ ಕೆಲಸ ಆರಂಭಗೊಳ್ಳುತ್ತಿದ್ದು, ಕಾವೇರಿ ನೀರಾವರಿ ನಿಗಮ ವ್ಯವಸ್ಥಾಪಕ » ನಾಲ್ಕನೇ ಪುಟದಲ್ಲಿ

## ವಿದ್ಯುತ್ ಸಮಸ್ಯೆ ಎದುರಾಗದಂತೆ ಕ್ರಮ ವಹಿಸಿ



• ಪ್ರಜೋದಯ ವರದಿ

**ಹಾಸನ:** ತಾಲ್ಲೂಕಿನಲ್ಲಿ ವಿದ್ಯುತ್ ಸಮಸ್ಯೆ ಎದುರಾಗದಂತೆ ಅಧಿಕಾರಿಗಳು ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕೆಂದು ಶಾಸಕ ಹೆಚ್.ಪಿ.ಸ್ವರೂಪ್ ಅವರು ಸೆಸ್ಕಾಂ ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಗರದ ಸಂತೆಪೇಟೆಯಲ್ಲಿರುವ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ವೃತ್ತ ಕಚೇರಿ ಸಭಾಂಗಣದಲ್ಲಿ ಶನಿವಾರ ವಿದ್ಯುತ್ ಗುತ್ತಿಗೆದಾರರ ಮತ್ತು ಸೆಸ್ಕಾಂ, ಕವಿಪ್ರನಿನಿಯ ಅಧಿಕಾರಿಗಳ ಜೊತೆ ಸಮನ್ವಯ ಮತ್ತು ಕುಂದುಕೊರತೆ ಸಭೆಯಲ್ಲಿ ಮಾತನಾಡಿದ ಅವರು, ಹಾಸನ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ವಿದ್ಯುತ್ ಕಂಬಗಳು ದುಸ್ಥಿತಿಯ ಲ್ಲಿದ್ದರೆ ಅವುಗಳಿಗೆ ಬದಲಿ ವ್ಯವಸ್ಥೆ ಮಾಡಿ ಸಾರ್ವಜನಿಕರಿಗೆ ಅನುಕೂಲ ಕಲ್ಪಿಸಬೇಕೆಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ವಿದ್ಯುತ್ ಪರಿವರ್ತಕಗಳ ಕೊರತೆ ಇದ್ದ ಕಡೆ ಅವುಗಳನ್ನು ಅಳವಡಿಸಿ ಹೆಚ್ಚುವರಿ ಲೈನ್ ವ್ಯವಸ್ಥೆ ಕಲ್ಪಿಸಬೇಕು. ಹಾಸನ ನಗರಸಭೆ ಮಹಾನಗರ ಪಾಲಿಕೆಯಾಗಿ ಮೇಲ್ದರ್ಜೆಗೇರಿರುವ ನಗರದಲ್ಲಿ ವಿದ್ಯುತ್ ಪೂರೈಕೆ ಪೂರಕವಾಗಿ ಕೆಲಸ ಮಾಡಬೇಕು. ಮಳೆಗಾಲದಲ್ಲಿ ಹೆಚ್ಚಿನ ವಿದ್ಯುತ್ ಸಮಸ್ಯೆ ಎದುರಾಗುತ್ತಿದ್ದು, ಅಧಿಕಾರಿಗಳು ವಿದ್ಯುತ್ ಸಮಸ್ಯೆಗಳ ಬಗ್ಗೆ ದೂರು ಬಂದಲ್ಲಿ ತಕ್ಷಣ ಕಾರ್ಯ ಪ್ರವೃತ್ತರಾಗಬೇಕೆಂದು ಸೂಚನೆ ನೀಡಿದರು.

## 12 ಮಂದಿ ಅವಿರೋಧ ಆಯ್ಕೆ | 1 ಸ್ಥಾನಕ್ಕೆ ಮಾತ್ರ ಚುನಾವಣೆ

# ಮತ್ತೆ ಜೆಡಿಎಸ್ ತೆಕ್ಕೆಗೆ ಬಂದ ಹೆಚ್‌ಡಿಸಿಸಿ ಬ್ಯಾಂಕ್

• ಪ್ರಜೋದಯ ವರದಿ

**ಹಾಸನ:** ಹಾಸನ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಆಡಳಿತ ಮಂಡಳಿಯ 13 ನಿರ್ದೇಶಕ ಸ್ಥಾನಗಳ ಪೈಕಿ 12 ಸ್ಥಾನಗಳಿಗೆ ಜೆಡಿಎಸ್ ಬೆಂಬಲಿಗರು ಅವಿರೋಧವಾಗಿ ಆಯ್ಕೆಯಾಗುವ ಮೂಲಕ ಮತ್ತೊಮ್ಮೆ ಜೆಡಿಎಸ್ ಹಿಡಿತ ಸಾಧಿಸಿದೆ.

ಚನ್ನರಾಯಪಟ್ಟಣ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಕ್ಷೇತ್ರದಿಂದ ಶಾಸಕ ಸಿ.ಎನ್. ಬಾಲಕೃಷ್ಣ, ಹೊಳೆನರಸೀಪುರ ತಾಲ್ಲೂಕಿನಿಂದ ವಿಧಾನ ಪರಿಷತ್ ಸದಸ್ಯ ಡಾ.ಸೂರಜ್ ರೇವಣ್ಣ, ಹಾಲು ಉತ್ಪಾದಕರ ಸಹಕಾರ ಸಂಘದಿಂದ ಸೋಮನಹಳ್ಳಿ ನಾಗರಾಜು, ಅರಕಲಗೂಡು ತಾಲ್ಲೂಕಿನಿಂದ ಹೊನ್ನವಳ್ಳಿ ಸತೀಶ್, ಬೇಲೂರು ತಾಲ್ಲೂಕಿನಿಂದ ನಿರ್ದೇಶಕ ಎಂ.ಎನ್. ನಾಗರಾಜು, ಆಲೂರು-ಸಕಲೇಶಪುರ ತಾಲ್ಲೂಕು ಕ್ಷೇತ್ರದಿಂದ ಕಬ್ಬಿನಹಳ್ಳಿ ಜಗದೀಶ್, ಸಗಟು ಮಾರಾಟ ಮಳಿಗೆಗಳು ಹಾಗು ಇತರೆ ಸಹಕಾರ ಸಂಘಗಳ ಕ್ಷೇತ್ರದಿಂದ ಬಿದರಕೆರೆ ಜಯರಾಮ್, ಕೃಷಿ ಉತ್ಪನ್ನ ಮಾರಾಟ ಸಹಕಾರ ಸಂಘದಿಂದ ಹೆಚ್.ಎನ್.ದೇವೇಗೌಡ(ಪಾಪಣ್ಣಿ) ಅವರು ಪುನರಾಯ್ಕೆಯಾಗಿದ್ದಾರೆ.



ಹಾಸನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಕ್ಷೇತ್ರದಿಂದ ಹನುಮೇಗೌಡ, ಅರಸೀಕೆರೆ ತಾಲ್ಲೂಕಿನಿಂದ ಶೇಖರಪ್ಪ, ಹಾಲು ಉತ್ಪಾದಕರ ಸಹಕಾರ ಸಂಘಗಳ ಕ್ಷೇತ್ರದಿಂದ ಕೆ.ಎಸ್.ಮಂಜೇಗೌಡ, ಗಂಡಸಿ ಗಂಗಾಧರ್ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. 13 ಸ್ಥಾನಗಳಲ್ಲಿ 12 ಮಂದಿ ನಿರ್ದೇಶಕರು ಅವಿರೋಧ ಆಯ್ಕೆಯಾಗಿರುವುದರಿಂದ ಹೆಚ್‌ಡಿಸಿಸಿ ಬ್ಯಾಂಕ್ ಆಡಳಿತ ಮತ್ತೊಮ್ಮೆ ಜೆಡಿಎಸ್ ತೆಕ್ಕೆಯಲ್ಲೇ ಉಳಿದುಕೊಂಡಂತೆ ಆಗಿದೆ.

### ಇನ್ನೊಂದು ಕ್ಷೇತ್ರಕ್ಕೆ ಮಾತ್ರ ಚುನಾವಣೆ

ಹಾಲಿ ನಿರ್ದೇಶಕ ಗಿರೀಶ್ ಚನ್ನವೀರಪ್ಪ ಅವರು ಸ್ಪರ್ಧೆಗಿಳಿದಿರುವ ವ್ಯವಸಾಯೇತರ ಪತ್ತಿನ ಸಹಕಾರ ಸಂಘಗಳು ಹಾಗು ಪಟ್ಟಣ ಸಹಕಾರ ಬ್ಯಾಂಕುಗಳ ಕ್ಷೇತ್ರದಲ್ಲಿ ಚನ್ನರಾಯಪಟ್ಟಣ ತಾಲ್ಲೂಕಿನ ಮಟ್ಟನವಿಲೆ ರುದ್ರೇಶ್ ಎದುರಾಳಿಯಾಗಿದ್ದಾರೆ. ಹೀಗಾಗಿ ಈ ಒಂದು ಕ್ಷೇತ್ರಕ್ಕೆ ಮಾತ್ರ ಚುನಾವಣೆ ನಡೆಯುವುದು ಅನಿವಾರ್ಯವಾಗಿದ್ದು, ಫಲಿತಾಂಶ ಕುತೂಹಲ ಮೂಡಿ ಸಿದೆ. ಈ ಕ್ಷೇತ್ರದಲ್ಲಿ ಒಟ್ಟು 45 ಮತದಾರ ರಿದ್ದು, ಯಾರು ಹೆಚ್ಚು ಮತದಾರರ ಮನವೊಲಿಸಿ ಗೆಲುವು ಸಾಧಿಸಲಿದ್ದಾರೆ ಎಂಬುದು ಕುತೂಹಲ ಕೆರಳಿಸಿದೆ.

## ಯಡಕುಮರಿಯಲ್ಲಿ ಭಾರೀ ಮಳೆ: ರೈಲ್ವೆ ಸಂಚಾರ ಬಂದ್

• ಪ್ರಜೋದಯ ವರದಿ

**ಸಕಲೇಶಪುರ:** ತಾಲ್ಲೂಕಿನ ಹೆತ್ತೂರು ಹೋಬಳಿ ಹೊಂಗಡಳ್ಳ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಯಡಕುಮರಿಯಲ್ಲಿ ಶನಿವಾರ ಸುರಿದ ಭಾರೀ ಮಳೆಯಿಂದ ಭೂಕುಸಿತ ಉಂಟಾ ಗಿದ್ದು ಮಂಗಳೂರು-ಬೆಂಗಳೂರು ರೈಲ್ವೆ ಮಾರ್ಗ ಸ್ಥಗಿತಗೊಂಡಿದೆ.

ಯಡಕುಮರಿ ಗ್ರಾಮ ಸಮೀಪದ ಮಂಗಳೂರು-ಬೆಂಗಳೂರು ರೈಲ್ವೆ ಮಾರ್ಗ 63/00 ರಿಂದ 70/600 ಮಾರ್ಗದವರೆಗೂ ಸಂಜೆ 4.30ಕ್ಕೆ ಮೂರು ಭಾಗದಲ್ಲಿ ಭೂಕುಸಿತ ಉಂಟಾಗಿದೆ. ಇದೇ ಮಾರ್ಗದ 7 ಕಿ.ಮೀ. ವ್ಯಾಪ್ತಿಯಲ್ಲಿ ಒಟ್ಟು 15 ಕಡೆ ಭೂಕುಸಿತ ಸಂಭವಿಸಿದೆ. ಮಾರ್ಗ ದಲ್ಲಿ ಸಂಚರಿಸುತ್ತಿದ್ದ ಎಲ್ಲಾ ರೈಲುಗಳ ಸಂಚಾರವನ್ನು ರೈಲ್ವೆ ಇಲಾಖೆ ಸ್ಥಗಿತಗೊಳಿಸಿದೆ.

ಈ ಮಾರ್ಗದಲ್ಲಿ 12 ಪ್ರಯಾಣಿಕರ ಹಾಗು 9 ಗೂಡ್ಸ್ ರೈಲು ನಿತ್ಯ ಸಂಚರಿಸುತ್ತವೆ. ಸದ್ಯ ಭೂಕುಸಿತ ಸಂಭವಿಸಿರುವುದರಿಂದ ಮಳೆ ಕಡಿಮೆಯಾಗಿ ರೈಲ್ವೆ ಇಲಾಖೆ ಕುಸಿದಿರುವ ಮಣ್ಣನ್ನು ತೆರವುಗೊಳಿಸುವವರೆಗೂ ಮಂಗಳೂರು-ಬೆಂಗಳೂರು ರೈಲು ಸಂಚಾರದಲ್ಲಿ ವ್ಯತ್ಯಯ ವಾಗಲಿದೆ.





# ನನ್ನದೊಂದು ಮನವಿ

ಶ್ರಾವಣ ಮಾಸನೂ ಬಂತು ಭೀಮನ ಅಮಾವಾಸ್ಯೆ, ನಾಗರ ಪಂಚಮಿ, ವರಮಹಾಲಕ್ಷ್ಮಿ ಹಬ್ಬ, ಉಪಾಕರ್ಮ ಹಬ್ಬನೂ ಆಯ್ತು ಈಗ ನನ್ನ ಹಬ್ಬ ಅಂದ್ರೆ, ಗೌರಿ ಗಣೇಶ ಹಬ್ಬ. ಎಲ್ಲರೂ ನನ್ನ ಹಬ್ಬವನ್ನು ಬಹಳ ಸಡಗರ, ಸಂಭ್ರಮದಿಂದ ಆಚರಣೆ ಮಾಡುತ್ತೀರಾ ಇದು ನನಗೆ ಬಹಳ ಖುಷಿ ಕೊಡುವ ವಿಚಾರನೂ ಹೌದು.

ಮನೆಗಳಲ್ಲಿ, ಶಾಲೆಗಳಲ್ಲಿ, ಕಛೇರಿಗಳಲ್ಲಿ, ಬೀದಿ ಬದಿಯಲ್ಲಿ ನನಗೆ ಅದ್ದೂರಿಯಾಗಿ ಸ್ವಾಗತವನ್ನು ಕೋರಿ ಪೂಜೆಯನ್ನು ಖುಷಿಯಿಂದ ನೆರವೇರಿಸುತ್ತೀರಾ.. ತರಹೇವಾರಿ ಭಕ್ಷ್ಯಗಳನ್ನು ಮಾಡಿ, ಅದರಲ್ಲೂ ನನಗಿಷ್ಟವಾದ ಮೋದಕ, ಕಡುಬು ನೈವೇದ್ಯ ಮಾಡಿ ಪ್ರಸಾದದ ರೂಪದಲ್ಲಿ ಭಕ್ತಾದಿಗಳಿಗೆ ವಿತರಿಸುತ್ತೀರಾ..

ರಂಗೋಲಿ ಸ್ಪರ್ಧೆ, ಹಾಡಿನ ಸ್ಪರ್ಧೆ, ಮುಂತಾದ ಸ್ಪರ್ಧೆಗಳನ್ನು ಏರ್ಪಡಿಸಿ ನನ್ನ ಹಬ್ಬಕ್ಕೆ ಮತ್ತಷ್ಟು ರಂಗನ್ನು ನೀಡುತ್ತೀರಾ ಆದರೆ, ನನ್ನನ್ನು ವಿಸರ್ಜಿಸುವ ರೀತಿ ಮಾತ್ರ ಬಹಳ ಬೇಸರ ತರುವಂತದ್ದಾಗಿರುತ್ತದೆ. ನಾನು ಬಹಳ ತೂಕವಿರುವ ಕಾರಣ ನನ್ನನ್ನು ಎತ್ತಲು ಸುಮಾರು ಜನರ ಸಹಾಯದ ಮೊರೆ ಹೋಗುತ್ತೀರಾ.

ಕೆಲವರು ನನ್ನ ಮೇಲಿನ ಭಕ್ತಿಯಿಂದಲೋ, ಗೌರವದಿಂದಲೋ ಮಡಿಯಿಂದ ಶುಚಿಯಾಗಿ ಬರುತ್ತಾರೆ ಇನ್ನೂ ಕೆಲವರು ಮಧ್ಯಪಾನ ಮಾಡಿ ನನ್ನ ಎತ್ತಲು ಸಹಾಯಕ್ಕೆಂದು ಮುಂದೆ ಬರುತ್ತಾರೆ. ಆ ದುರ್ವಾಸನೆಯನ್ನು ಸಹಿಸಲಾರದೆ ಬಹಳ ನೋವನ್ನು ಅನುಭವಿಸುತ್ತೇನೆ.

ಹಾಗೋ ಹೀಗೋ ಮಾಡಿ ನನ್ನನ್ನು ಜೈಕಾರದೊಂದಿಗೆ ದೊಡ್ಡದಾದ ಗಾಡಿಯೊಳಗೆ ಕೂರಿಸಿ ಮೆರವಣಿಗೆ ಪ್ರಾರಂಭಿಸುತ್ತೀರಿ. ದಾರಿಯುದಕ್ಕೂ ಪಟಾಕಿ, ನನ್ನದೇ ನಾಮಧೇಯ, ಜಪ ಕೇಳಿಸಿಕೊಳ್ಳುತ್ತಾ ಖುಷಿಯಾಗಿ ನಿಮ್ಮೊಂದಿಗೆ ಮೌನವಾಗಿ ಚಲಿಸುತ್ತಿರುತ್ತೇನೆ. ನನ್ನನ್ನು ಖರೀದಿ ಮಾಡುವಾಗ ಎಷ್ಟೆಲ್ಲಾ ವಿಚಾರಿಸುತ್ತೀರಾ? ಮೂಗು ಸರಿಯಿದ್ಯಾ, ಸೊಂಡಿಲು ಸರಿಯಿದ್ಯಾ, ನೋಡಲು ಅಂದವಾಗಿದಿಯಾ, ಎಷ್ಟು ಎತ್ತರದ್ದು ತೊಗೋಬೇಕು, ನಮ್ಮ ಹಣಕ್ಕೆ ತಕ್ಕಂತೆ ಇದೆಯಾ ಏನೆಲ್ಲಾ ಯೋಚಿಸುತ್ತೀರಾ ಅಲ್ವಾ?

ಆದರೆ ನನ್ನನ್ನು ಗಾಡಿಯಿಂದ ಇಳಿಸಿ ವ್ಯವಸ್ಥಿತ ಸ್ಥಳದಲ್ಲಿ ವಿಸರ್ಜಿಸುವಾಗ ಮಾತ್ರ ಈ ತರಹದ ಎಚ್ಚರಿಕೆ ಯಾಕೆ ವಹಿಸುವುದಿಲ್ಲ? ಕೆಲವರು ನದಿಯಲ್ಲಿ, ಕೆರೆಯಲ್ಲಿ ಹೇಗೆಂದರೆ ಹಾಗೆ ನನ್ನನ್ನು ಮೇಲಿಂದ ಧುಮುಕಿಸುತ್ತಾರೆ. ಸರಿಯಾದ ರೀತಿಯಲ್ಲಿ ನೀರಿನ ಆಳದವರೆಗೂ ನಾನು ತಲುಪಿದೆನೋ ಇಲ್ಲವೋ ಅದೂ ಸಹ ಗಮನಿಸುವುದಿಲ್ಲ ಒಂದರ ಹಿಂದೆ ಒಂದರಂತೆ ಸಾಲು ಸಾಲಾಗಿ ನೀರಿಗೆ ಧುಮುಕಿಸುತ್ತಲೇ ಇರುತ್ತಾರೆ.

ಇದರ ನಡುವೆ ಮಧ್ಯ ವ್ಯಸನಿಗಳ ದುರ್ವಾಸನೆ, ಅಡಿಕೆ ವಾಸನೆ ಬೇರೆ. ಕೆಲವರು ಅವರವರ ಮನೆಯಲ್ಲಿ ನೀರು ತುಂಬಿರುವ ಬಕೆಟ್ ಒಳಗೆ ನನ್ನನ್ನು ಪುನಃ ಪೂಜೆಯೊಂದಿಗೆ ಶಾಸ್ತ್ರೋಕ್ತವಾಗಿ ಮುಳುಗಿಸುತ್ತಾರೆ. ನನ್ನನ್ನು ತೊಗೊಂಡು ಬರುವಾಗ ಯಾವ ರೀತಿ ಭಕ್ತಿಯಿಂದ, ಜೈಕಾರದಿಂದ, ಮುತುವರ್ಜಿಯಿಂದ ತರುತ್ತೀರೋ ಅದೇ ರೀತಿ ವಿಸರ್ಜನೆಯ ವೇಳೆಯಲ್ಲೂ ಸಹ ಯಾವುದೇ ರೀತಿಯ ಭಿನ್ನವಾಗದಂತೆ ಎಚ್ಚರವಹಿಸಿ.

ನೀರಿನಲ್ಲಿ ಪೂರ್ತಿ ಮುಳುಗದೆ, ಕರಗದೆ ನನ್ನ ದೇಹ ಭಿನ್ನವಾಗಿ ಅರೆ ಬರೆಯಾಗಿ ತೇಲುತ್ತಿರುತ್ತೇನೆ ದಯವಿಟ್ಟು ನನ್ನನ್ನು ಈ ರೀತಿಯ ವಿಸರ್ಜನೆಯೊಂದಿಗೆ ಕಳುಹಿಸಿ ಕೊಡಬೇಡಿ ಎನ್ನುವುದೇ ನನ್ನ ಕಳಕಳಿಯ ಮನವಿ.

**– ವಾಣಿ ಶಿವಕುಮಾರ್,** ಎನ್.ಶಿವಾಣಿ

## 17–8–2025 ದಿನ ಭವಿಷ್ಯ

**ಮೇಷ:** ನೀವು ವಿರಾಮದ ಸಂತೋಷವನ್ನು ಅನುಭವಿಸಲಿದ್ದೀರಿ. ಹಣದ ಚಲನೆ ದಿನವಿಡೀ ಮುಂದುವರಿಯುತ್ತದೆ ಮತ್ತು ದಿನದ ಅಂತ್ಯದ ನಂತರ ನೀವು ಉಳಿಸಲು ಸಾಧ್ಯವಾಗುತ್ತದೆ. ಕುಟುಂಬದ ಬಾಧ್ಯತೆಗಳನ್ನು ಮರೆಯಬೇಡಿ. ನೀವು ಜನಪ್ರಿಯರಾಗಿರುತ್ತೀರಿ ಮತ್ತು ಸುಲಭವಾಗಿ ವಿರುದ್ಧ ಲಿಂಗದ ಸದಸ್ಯರ ಸೆಳೆಯುತ್ತೀರಿ. ನಿಮ್ಮ ಧರ್ಮಪತ್ನಿ ನಿಮ್ಮ ದೌರ್ಬಲ್ಯಗಳಿಗೆ ಮುಲಾಮು ಹಚ್ಚುತ್ತಾರೆ.

**ವೃಷಭ:** ನೀವು ವಿಶ್ರಾಂತಿ ಪಡೆಯಲು ಸಾಧ್ಯವಾಗುವ ಒಂದು ದಿನ. ನಿಮ್ಮ ಸ್ನಾಯುಗಳಿಗೆ ವಿಶ್ರಾಂತಿ ನೀಡಲು ತೈಲದಿಂದ ನಿಮ್ಮ ದೇಹಕ್ಕೆ ಮಸಾಜ್ ಮಾಡಿ. ಇಂದು ನೀವು ನಿಮ್ಮ ಮಕ್ಕಳ ಕಾರಣದಿಂದ ಆರ್ಥಿಕ ಲಾಭವನ್ನು ಪಡೆಯುವ ಸಾಧ್ಯತೆ ಕಂಡುಬರುತ್ತಿದೆ. ಇದರಿಂದ ನೀವು ತುಂಬಾ ಸಂತೋಷಪಡುತ್ತೀರಿ.

**ಮಿಥುನ:** ನಿಮ್ಮ ಅಸಭ್ಯ ವರ್ತನೆ ನಿಮ್ಮ ಹೆಂಡತಿಯ ಮನಸ್ಸನ್ನು ಹಾಳು ಮಾಡುತ್ತದೆ. ನೀವು ಯಾರನ್ನಾದರೂ ಅಗೌರವದಿಂದ ಕಾಣುವುದು ಹಾಗೂ ಸಂಬಂಧವನ್ನು ಲಘುವಾಗಿ ತೆಗೆದು ಕೊಳ್ಳುವುದು ಅಪಾಯಕ್ಕೆ ಅದನ್ನು ತೀವ್ರವಾಗಿ ಘಾಸಿಗೊಳಿಸಬಹುದು ಎಂದು ಅರ್ಥ ಮಾಡಿಕೊಳ್ಳಬೇಕು. ಹೂಡಿಕೆ ಮಾಡುವುದು ಅನೇಕ ಬಾರಿ ನಿಮಗೆ ಪ್ರಯೋಜನಕಾರಿಯೆಂದು ಸಾಬೀತುಪಡಿಸುತ್ತದೆ

**ಕರ್ಕಾಟಕ:** ನೀವು ಚೈತನ್ಯದಿಂದ ತುಂಬಿರುತ್ತೀರಿ ಮತ್ತು ಇಂದು ಅಸಾಮಾನ್ಯವಾದದ್ದೇನಾದರೂ ಸಾಧಿಸುತ್ತೀರಿ. ಅನಿರೀಕ್ಷಿತ ಬಿಲ್‌ಗಳು ಹಣಕಾಸಿನ ಹೊರೆಯನ್ನು ಹೆಚ್ಚಿಸುತ್ತದೆ. ಕುಟುಂಬದ ಸದಸ್ಯರ ಅಗತ್ಯಗಳಿಗೆ ಆದ್ಯತೆ ನೀಡಿ. ನೀವು ಅವರ ಸಲುವಾಗಿ ಕಾಳಜಿ ತೆಗೆದುಕೊಳ್ಳುತ್ತೀರೆಂದು ಅವರಿಗೆ ಅರ್ಥವಾಗುವ ಹಾಗೆ ಅವರ ಸಂತೋಷವನ್ನು ಹಂಚಿಕೊಳ್ಳಿ.

**ಸಿಂಹ:** ಮಾನಸಿಕ ಶಾಂತಿಗಾಗಿ ನಿಮ್ಮ ಒತ್ತಡವನ್ನು ಪರಿಹರಿಸಿ. ಹಣ ನಿಮ್ಮ ಕೈಗಳ ಮೂಲಕ ಸುಲಭವಾಗಿ ಜಾರಿಹೋದರೂ – ನಿಮ್ಮ ಅದೃಷ್ಟದ ತಾರೆಗಳು ನಿಮಗೆ ಹಣಕಾಸು ಸುಲಭವಾಗಿ ದೊರಕುವಂತೆ ಮಾಡುತ್ತದೆ. ಮಕ್ಕಳು ನಿಮ್ಮ ನಿರೀಕ್ಷೆಗಳನ್ನು ಪೂರೈಸಲು ವಿಫಲವಾಗಿ ನಿಮಗೆ ನಿರಾಶೆಯುಂಟುಮಾಡಬಹುದು. ನಿಮ್ಮ ಕನಸು ನನಸಾಗಿಸಲು ನೀವು ಅವರನ್ನು ಪ್ರೋತ್ಸಾಹಿಸಬೇಕು.

**ಕನ್ಯಾ:** ಮೋಜಿಗಾಗಿ ಹೊರಹೋಗುವವರಿಗೆ ಸಂತೋಷ ಮತ್ತು ಆನಂದವನ್ನು ಹಂಚಿಕೊಳ್ಳಿ. ಇಂದು ಹೂಡಿಕೆಗಳನ್ನು ಮಾಡಬಾರದು. ನೀವು ಬಯಸುವ ಎಲ್ಲಾ ಗಮನವನ್ನೂ ನೀವು ಪಡೆಯುವ ಒಳ್ಳೆಯ ದಿನ ನಿಮ್ಮ ಮನಸ್ಸಿನಲ್ಲಿ ಅನೇಕ ವಿಷಯಗಳಿರುತ್ತವೆ ಹಾಗೂ ನೀವು ಯಾವುದನ್ನು ಅನುಸರಿಸಬೇಕೆನ್ನುವ ಸಮಸ್ಯೆ ಹೊಂದಿರುತ್ತೀರಿ.

**ತುಲಾ:** ಮಾನಸಿಕ ಒತ್ತಡ ತರುವ ಸುಪ್ತ ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ. ಈ ರಾಶಿಚಕ್ರದ ಉದ್ಯಮಿಗಳು, ಇಂದು ನಿಮ್ಮ ಬಳಿ ಹಣವನ್ನು ಕೇಳುತ್ತಾರೆ ಮತ್ತು ನಂತರ ಮರುಪಾವತಿ ಮಾಡದೇ ಇರುವಂತಹ ನಿಮ್ಮ ಮನೆಯ ಸದಸ್ಯರಿಂದ ದೂರವಿರಬೇಕು.

**ವೃಶ್ಚಿಕ:** ನಿಮ್ಮಲ್ಲಿ ಇಂದು ಚುರುಕುತನವನ್ನು ನೋಡಬಹುದು. ನಿಮ್ಮ ಆರೋಗ್ಯವು ಇಂದು ನಿಮ್ಮನ್ನು ಸಂಪೂರ್ಣವಾಗಿ ಬೆಂಬಲಿಸುತ್ತದೆ. ಹೂಡಿಕೆ ಶಿಫಾರಸು ಮಾಡಲಾಗಿದ್ದರೂ ಸರಿಯಾದ ಸಲಹೆ ಪಡೆಯಬೇಕು. ಇತರರಿಗೆ ಪ್ರತಿಫಲಗಳು ತರುವ ನಿಮ್ಮ ಸಾಮರ್ಥ್ಯ ಪ್ರತಿಫಲ ತರುತ್ತದೆ.

**ಧನು:** ನಿಮ್ಮ ನೀಡುವ ವರ್ತನೆ ಪರೋಕ್ಷವಾಗಿ ನಿಮಗೆ ಆಶೀರ್ವಾದವೇ ಆಗುತ್ತದೆ, ಏಕೆಂದರೆ ನೀವು ಅನುಮಾನ, ನಿರಾಸೆ, ವಿಶ್ವಾಸರಾಹಿತ್ಯ ಅಹಂಭಾವ ಮತ್ತು ಅಸೂಯೆಯಂಥ ಅನೇಕ ದುರ್ಗುಣಗಳಿಂದ ಮುಕ್ತಿ ಹೊಂದುವ ಸಾಧ್ಯತೆಗಳಿವೆ. ಸಮಯ ಮತ್ತು ಹಣದ ಕಾತರ ನೀವು ಮಾಡಬೇಕು ಇಲ್ಲದಿದ್ದರೆ ಮುಂಬರುವ ಸಮಯ ತೊಂದರೆಗಳಿಂದ ತುಂಬಿರಬಹುದು.

**ಮಕರ:** ಸಂತೋಷದ ದಿನಕ್ಕಾಗಿ ಮಾನಸಿಕ ಒತ್ತಡವನ್ನು ತಪ್ಪಿಸಿ. ಯಾವುದೇ ಅನುಭವದ ವ್ಯಕ್ತಿಯ ಸಲಹೆ ಇಲ್ಲದೆ, ನಿಮಗೆ ಆರ್ಥಿಕ ನಷ್ಟವಾಗುವ ಯಾವುದೇ ಕೆಲಸವನ್ನು ಮಾಡಬೇಡಿ. ಸಾಮಾಜಿಕ ಕೂಟಗಳಲ್ಲಿ ನಿಮ್ಮ ಹಾಸ್ಯದ ಪ್ರಕೃತಿ ನಿಮ್ಮನ್ನು ಜನಪ್ರಿಯಗೊಳಿಸುತ್ತದೆ. ತಮಗಾಗಿ ಒಳ್ಳೆಯ ಸಮಯವನ್ನು ಹೊಂದಿದ್ದರೆ ಚೆನ್ನಾಗಿರುತ್ತದೆ. ಇದು ಅಗತ್ಯವಿದೆ.

**ಕುಂಭ:** ವಿಶ್ರಾಂತಿ ಪ್ರಮುಖವಾದ ಒಂದು ದಿನ ಇತ್ತೀಚೆಗೆ ನೀವು ಬಹಳಷ್ಟು ಮಾನಸಿಕ ಒತ್ತಡ ಎದುರಿಸುತ್ತಿದ್ದೀರಿ – ಮನೋಲ್ಲಾಸ ಮತ್ತು ಮನೋರಂಜನೆ ನಿಮಗೆ ವಿಶ್ರಾಂತಿ ಪಡೆಯಲು ಸಹಾಯ ಮಾಡುತ್ತದೆ. ಯಾವುದೇ ಸಮಯದಲ್ಲಿ ಹಣದ ಅಗತ್ಯವಿರುತ್ತದೆ ಆದ್ದರಿಂದ ಇಂದು ಸಾಧ್ಯವಾದಷ್ಟು ನಿಮ್ಮ ಹಣವನ್ನು ಸಂಗ್ರಹಿಸುವ ಬಗ್ಗೆ ಆಲೋಚಿಸಿ.

**ಮೀನ:** ದೇಹದ ನೋವಿನಿಂದ ಬಳಲುವ ಸಾಧ್ಯತೆ ಹೆಚ್ಚಿದೆ. ನಿಮ್ಮ ದೇಹದ ಮೇಲೆ ಹೆಚ್ಚು ಒತ್ತಡ ಹಾಕುವ ಯಾವುದೇ ದೈಹಿಕ ಪರಿಶ್ರಮವನ್ನು ತಪ್ಪಿಸಲು ಪ್ರಯತ್ನಿಸಿ. ಸಾಕಷ್ಟು ವಿಶ್ರಾಂತಿ ತೆಗೆದುಕೊಳ್ಳಿ. ನಿಮ್ಮ ಆರ್ಥಿಕ ಸ್ಥಿತಿ ಸುಧಾರಿಸಿದರೂ ಹಣದ ಹೊರಹರಿವು ನಿಮ್ಮ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ತೊಂದರೆಯುಂಟು ಮಾಡುತ್ತದೆ.

# ಆಹಾರ ಸೇವಿಸುವ ಮುನ್ನ ಗಮನಿಸಿ ಈ ಆರನ್ನು...

ಬದುಕುವುದಕ್ಕಾಗಿ ತಿನ್ನುವುದು ಎಂದು ನಮ್ಮ ಹಿರಿಯರು ತೋರಿಸಿಕೊಟ್ಟ ಮಾರ್ಗವನ್ನು ಮರೆತು ತಿನ್ನುವುದಕ್ಕಾಗಿಯೇ ಬದುಕುವುದು ಎಂಬ ಆಧುನಿಕತೆಯ ದಾರಿಯನ್ನು ನಮ್ಮದಾಗಿಸುವ ಪ್ರಯತ್ನದಲ್ಲಿದ್ದೇವೆ. ಕೆಲವರಿಗೆ, ನನ್ನ ಮಾತುಗಳು ಅಚ್ಚರಿಯೆನಿಸಬಹುದು. ಅರೆ, ಇವರು ಯಾಕಪ್ಪ ಹೀಗೆ ಮಾತಾಡ್ತಾ ಇದಾರೆ?! ಈ ರೀತಿ ತಿನ್ನುವುದರಲ್ಲಿ ತಪ್ಪೇನಿಲ್ವಲ್ಲ? ನಾವೆಲ್ಲರೂ ಇದನ್ನೇ ಮಾಡುವುದಲ್ಲವೇ? ಎಂದೆನಿಸುವುದು ಸಹಜ. ಆದರೆ ಆಯುರ್ವೇದ ಹೇಳುವಂತೆ ನೀತಿ-ನಿಯಮ ಇಲ್ಲದ ಬದುಕು ಮತ್ತು ಶಿಸ್ತು-ಬದ್ಧತೆ ಇಲ್ಲದ ಊಟ ಎಂದಿಗೂ ರೋಗಕಾರಕ.



ಆಯುರ್ವೇದದ ಪ್ರಕಾರ ಚಿಂತಾ, ಶೋಕ, ಭಯ, ಕ್ರೋಧ ಮತ್ತು ಉದ್ವೇಗಗಳು ಇದ್ದಾಗ ಆಹಾರ ಸೇವಿಸಿದರೆ ಅದು ಸರಿಯಾಗಿ ಜೀರ್ಣವಾಗುವುದಿಲ್ಲ. ಕಾರಣ, ನಮ್ಮ ಭಾವನೆಗಳಿಗೂ ಮತ್ತು ನಮ್ಮ ಜೀರ್ಣಕ್ರಿಯೆಗೂ ನೇರವಾದ ಸಂಬಂಧವಿದೆ. ಮಾನಸಿಕ ಏರುಪೇರುಗಳಿಂದ ಜೀರ್ಣಕ್ರಿಯೆಯೂ ಏರುಪೇರು ಆಗುತ್ತದೆ. ಅಂತೆಯೇ ಜೀರ್ಣಕ್ರಿಯೆ ಸರಿ ಇಲ್ಲದಿದ್ದಾಗ ಮಾನಸಿಕ ಅಸಮತೋಲನವು ಕಾಣಿಸಿಕೊಳ್ಳುತ್ತದೆ. ಹಾಗಾಗಿ ಒಳ್ಳೆಯ ಮನಸ್ಸಿನಿಂದ ಮತ್ತು ಉತ್ತಮ ಭಾವನೆಗಳೊಂದಿಗೆ ಆಹಾರವನ್ನು ಸೇವಿಸುವುದು ಸದಾ ಶ್ರೇಷ್ಠ.

ಬೆಳಗ್ಗೆ ಎದ್ದ ಕೂಡಲೇ ಒಂದು ಲೀಟರ್‌ನಷ್ಟು ನೀರು, ಸ್ವಲ್ಪ ಹೊತ್ತು ಬಿಟ್ಟು ಒಂದು ಬಟ್ಟಲಿನಷ್ಟು ನೆನೆಸಿಟ್ಟ ಡ್ರೈ ಫ್ರೂಟ್ಸ್, ಸ್ವಲ್ಪ ಸಮಯದ ನಂತರ ರಾಗಿ ಗಂಜಿ/ಅಂಬಲಿ. ಇದಾದ ಮೇಲೆ ವ್ಯಾಯಾಮ. ವ್ಯಾಯಾಮದ ಮಧ್ಯೆ ಮಧ್ಯೆ ಜ್ಯೂಸ್ ಹೀರುವ ಅಭ್ಯಾಸ. ನಂತರ ಮನೆಯಲ್ಲಿ ಎಲ್ಲರಿಗೂ ತಯಾರಿಸಿದಂಥ ತಿಂಡಿಯ ಸೇವನೆ. ಜತೆಗೆ ಟೀ ಅಥವಾ ಕಾಫಿ ಇರಲೇಬೇಕು.

ಒಂದೆರಡು ಗಂಟೆಗಳು ಕಳೆದ ಮೇಲೆ ಒಂದು ಬಟ್ಟಲಿನಷ್ಟು ಹಣ್ಣು. ಸ್ವಲ್ಪ ಹೊತ್ತಾದ ಮೇಲೆ ಸ್ಪ್ರೌಟ್ಸ್ ಅಥವಾ ಸಲಾಡ್. ಮಧ್ಯಾಹ್ನದ ಊಟವಂತೂ ಇದ್ದಿದ್ದೇ. ಊಟದ ನಂತರ ಸ್ವೀಟ್ ತಿನ್ನಬೇಕೆಂಬುವ ಚಪಲ. ಸುಮಾರು ನಾಲ್ಕೂವರೆ ಹೊತ್ತಿಗೆ ಟೀ ಜತೆಗೆ ಬಿಸ್ಕತ್ತು ಅಥವಾ ಖಾರದ ಯಾವುದಾದರೂ ಒಂದು ಕರಿದ ಪದಾರ್ಥ. ನಂತರ ವಾಕಿಂಗ್‌ಗೆ ಹೋಗಿ ಬಂದ ಮೇಲೆ ಯಾವುದಾದರೂ ಒಂದು ಪಾನೀಯ. ನಂತರದ ಪ್ರಾಣಾಯಾಮಾಭ್ಯಾಸವನ್ನು ಮುಗಿಸಿ ರಾತ್ರಿಯ ಊಟ. ಮಲಗುವ ಮುನ್ನ ಒಂದು ಲೋಟ ಹಾಲನ್ನು ಕುಡಿದರೆ ನಿದ್ದೆಗೆ ಒಳ್ಳೆಯದು ಎಂಬ ಗೆಳೆಯರ ಆದೇಶದಂತೆ ನಿತ್ಯವೂ ರಾತ್ರಿಯ ಸಮಯದಲ್ಲಿ ಕ್ಷೀರಪಾನ.

ಇನ್ನು, ಯಾರಾದರೂ ಅತಿಥಿಗಳು ಮನೆಗೆ ಬಂದಾಗ ಅಗಷ್ಟೇ ತಿಂಡಿ ತಿಂದು ಕುಳಿತಿದ್ದರೂ, ಅವರಿಗೆ ಕಾಫಿ ತಿಂಡಿಯನ್ನು ನೀಡಿ ಅವರ ಜತೆಗೆ ಮತ್ತೆ ಮೆಲ್ಲುವ ಅಭ್ಯಾಸ.

ಮತ್ತೆ, ವಾಕಿಂಗ್‌ಗೆ ಹೋದಾಗ ಯಾರಾದರೂ ಸ್ನೇಹಿತರು ಸಿಕ್ಕಿಬಿಟ್ಟರೆ ಅ ಹತ್ತಿರದ ಹೋಟೆಲ್‌ಗೆ ಹೋಗಿ ಅವರ ಜತೆ ಸ್ವಲ್ಪ ಕಾಫಿ ಅಥವಾ ಸ್ವಲ್ಪ ತಿಂಡಿ ಸೇವಿಸುವ ಅಭ್ಯಾಸ... ಮೇಲಿನ ಅಭ್ಯಾಸವಿರುವ ಈ ವ್ಯಕ್ತಿ ನಮ್ಮೆಲ್ಲರಿಗೂ ಚಿರಪರಿಚಿತ ಅನ್ನಿಸುತ್ತಾರೆ, ಅಲ್ಲವೇ? ಕಾರಣ ಮಾಡರ್ನ್ ಲೈಫ್ ಸ್ಟೈಲ್‌ನ ಮೋಡಿಗೆ ಒಳಗಾದ ನಮ್ಮೆಲ್ಲರದ್ದೂ ಹೆಚ್ಚು ಕಡಿಮೆ ಇದೇ ಕಥೆ.

ಬದುಕುವುದಕ್ಕಾಗಿ ತಿನ್ನುವುದು ಎಂದು ನಮ್ಮ ಹಿರಿಯರು ತೋರಿಸಿಕೊಟ್ಟ ಮಾರ್ಗವನ್ನು ಮರೆತು ತಿನ್ನುವುದಕ್ಕಾಗಿಯೇ ಬದುಕುವುದು ಎಂಬ ಆಧುನಿಕತೆಯ ದಾರಿಯನ್ನು ನಮ್ಮದಾಗಿಸುವ ಪ್ರಯತ್ನದಲ್ಲಿದ್ದೇವೆ. ಕೆಲವರಿಗೆ, ನನ್ನ ಮಾತುಗಳು ಅಚ್ಚರಿಯೆನಿಸಬಹುದು. ಅರೆ, ಇವರು ಯಾಕಪ್ಪ ಹೀಗೆ ಮಾತಾಡ್ತಾ ಇದ್ದಾರೆ?! ಈ ರೀತಿ ತಿನ್ನುವುದರಲ್ಲಿ ತಪ್ಪೇನಿಲ್ವಲ್ಲ? ನಾವೆಲ್ಲರೂ ಇದನ್ನೇ ಮಾಡುವುದಲ್ಲವೇ? ಎಂದೆನಿಸುವುದು ಸಹಜ.

ಆದರೆ ಆಯುರ್ವೇದ ಹೇಳುವಂತೆ ನೀತಿ-ನಿಯಮ ಇಲ್ಲದ ಬದುಕು ಮತ್ತು ಶಿಸ್ತು-ಬದ್ಧತೆ ಇಲ್ಲದ ಊಟ ಎಂದಿಗೂ ರೋಗಕಾರಕ. ಹಾಗಾದರೆ, ಬನ್ನಿ ಯಾವಾಗ ತಿನ್ನಬೇಕು ಮತ್ತು ಎಷ್ಟು ತಿನ್ನಬೇಕು ಎಂಬ ಪ್ರಶ್ನೆಗಳಿಗೆ ಆಯುರ್ವೇದ ಸಿದ್ಧಾಂತದಲ್ಲಿ ಸಮಂಜಸವಾದ ಉತ್ತರವನ್ನು ಹುಡುಕೋಣ.

ಆಯುರ್ವೇದದ ಶಾಸ್ತ್ರದಲ್ಲಿ ನಮ್ಮ ಆಚಾರ್ಯರು ಒಂದು ಕಡೆ ಹೀಗೆ ಉಲ್ಲೇಖಿಸಿದ್ದಾರೆ- ಸಾಮಾನ್ಯವಾಗಿ ಎಲ್ಲಾ ರೋಗಗಳಿಗೂ ಮೂಲ ಕಾರಣವೇ ಆಹಾರ. ಮತ್ತೊಂದೆಡೆ ಆಹಾರವನ್ನು ಮಹಾ ಭೈಷಜ್ಯ ಎಂದು ಕರೆದಿದ್ದಾರೆ. ಅಂದರೆ, ಆಹಾರಕ್ಕೆ ಮಿಗಿಲಾದ ಔಷಧವಿಲ್ಲ ಎಂದು.



ಹಾಗಾದರೆ, ಎಲ್ಲ ವ್ಯಾಧಿಗಳಿಗೂ ಕಾರಣವಾಗುವ ಆಹಾರವನ್ನು ಒಂದು ಮಹತ್ತರವಾದ ಔಷಧಿಯನ್ನಾಗಿ ಬದಲಾಯಿಸುವ ವಿಧಿ ಏನು? ಎನ್ನುವ ಪ್ರಶ್ನೆಗೆ ಏಕೈಕ ಉತ್ತರವೆಂದರೆ ಆಹಾರ ಸೇವನಾ ನಿಯಮವನ್ನು ಪಾಲಿಸುವುದು. ಆಯುರ್ವೇದದಲ್ಲಿ ಉಲ್ಲೇಖಿಸಿರುವ ಆಹಾರ ವಿಜ್ಞಾನದ ಬಗ್ಗೆ ಅರಿವು ಮೂಡಿಸಿಕೊಳ್ಳುವುದು.

ನಮ್ಮ ಶಾಸ್ತ್ರದ ಆಹಾರ ವಿಜ್ಞಾನದಲ್ಲಿ ಯಾವಾಗ ತಿನ್ನಬೇಕು ಎಂಬ ಮುಖ್ಯವಾದ ಪ್ರಶ್ನೆಗೆ ಬಹಳ ವೈಜ್ಞಾನಿಕವಾದ ಉತ್ತರವನ್ನು ಕಾಣಬಹುದು. ಅದರಂತೆ, ಆಹಾರವನ್ನು ಸೇವಿಸುವ ಮುನ್ನ ಈ ಕೆಳಗೆ ಹೇಳಿದ ಲಕ್ಷಣಗಳು ಇವೆಯೇ ಎಂದು ಗಮನಿಸಬೇಕು.

**ಮಲ ಮೂತ್ರ ವಿಸರ್ಜನೆ ಆಗಿರಬೇಕು:** ನಾವು ಸೇವಿಸುವ ಆಹಾರವು ಪಚನವಾಗುವಾಗ ಆಹಾರದ ಸಾರಭಾಗ ಹಾಗೂ ಬೇಡದ ವಸ್ತುಗಳ ಮಲಭಾಗವು ಬೇರ್ಪಡೆಯಾಗುತ್ತವೆ. ಸಾರಭಾಗವು ನಮ್ಮ ದೇಹದ ಎಲ್ಲಾ ಧಾತುಗಳನ್ನು ಪೋಷಿಸಿದರೆ, ಮಲಭಾಗವು ಸಮಯಕ್ಕೆ ಸರಿಯಾಗಿ ದೇಹದಿಂದ ಹೊರ ಹೋಗುವ ಮೂಲಕ ಆರೋಗ್ಯವನ್ನು ಕಾಪಾಡು ತ್ತದೆ. ಬೆಳಗ್ಗೆ ಎದ್ದ ಕೂಡಲೇ ಯಾವುದೇ ಬಾಹ್ಯ ಪ್ರಚೋದನೆ ಇಲ್ಲದೆ ಆಗುವ ಮಲಪ್ರವೃತ್ತಿಯು ಸಮಯಕ್ಕೆ ಸರಿಯಾಗಿ ಆಗದಿದ್ದರೆ ಹಸಿವು ಚೆನ್ನಾಗಿ ಆಗುವುದಿಲ್ಲ ಎಂಬುದು ಎಲ್ಲರ ಅನುಭವ.

ಆದ್ದರಿಂದ ನಮ್ಮ ಅಗ್ನಿಯು ಸರಿಯಾಗಿ ಪ್ರಚೋದನೆಗೊಂಡು ಸೇವಿಸಿದ ಆಹಾರವು ಉತ್ತಮ ರೀತಿಯಲ್ಲಿ ಜೀರ್ಣವಾಗ ಬೇಕಾದರೆ, ಸಕಾಲದಲ್ಲಿ ಮಲಪ್ರವೃತ್ತಿಯಾಗಿರಬೇಕು. ಆಹಾರ ಸೇವನೆಗೆ ಇದು ಬಹಳ ಅವಶ್ಯಕವಾದ ಲಕ್ಷಣ.

**ಶರೀರವು ಲಘುವಾಗಿರ ಬೇಕು:** ಸಾಮಾನ್ಯವಾಗಿ ಜೀರ್ಣಕ್ರಿಯೆ ಉತ್ತಮವಾಗಿದ್ದು ದೇಹದಲ್ಲಿ ಯಾವುದೇ ರೀತಿಯ ಆಮ (ಸರಿಯಾಗಿ ಜೀರ್ಣವಾಗದ ಆಹಾರ) ಶೇಖರಣೆ ಇಲ್ಲವಾದರೆ ಶರೀರವು ಲಘು ಎನಿಸುತ್ತದೆ. ಅಂತೆಯೇ, ಯಾವುದೇ ರೀತಿಯ ಜಡತ್ವ ಅಥವಾ ಆಲಸ್ಯವಿಲ್ಲದಿದ್ದಾಗ ಸೇವಿಸಿದ ಆಹಾರವು ಸರಿಯಾಗಿ ಜೀರ್ಣವಾಗುತ್ತದೆ.

ಹಾಗಾಗಿ, ಆಹಾರ ಸೇವನೆಯ ಮುನ್ನವಾಗಿ ನಮ್ಮ ಶರೀರದ ಸ್ಥಿತಿಯನ್ನು ಗಮನಿಸಿ ನಂತರ ಆಹಾರ ಬೇಕೇ ಬೇಡವೇ ಎಂದು ವಿವೇಚಿಸಿ ಸೇವಿಸುವುದು ಒಳ್ಳೆಯದು. ಇಂದ್ರಿಯಗಳು ಶುದ್ಧವಾಗಿರಬೇಕು– ಇಂದ್ರಿಯಗಳಲ್ಲಿ, ವಿಶೇಷವಾಗಿ ನಮ್ಮ ನಾಲಿಗೆ ಮತ್ತು ಮೂಗುಗಳು ಸುಸ್ಥಿತಿಯಲ್ಲಿದ್ದಾಗ ಆಹಾರವು ಹೆಚ್ಚು ರುಚಿಸುತ್ತದೆ. ಆಹಾರದ ದೃಶ್ಯ ಮತ್ತು ಘಮಘಮಿಸುವ ಪರಿಮಳ ಬಂದರೆ ಅದರಿಂದ ನಮ್ಮ ಹಸಿವು ಇನ್ನೂ ಹೆಚ್ಚಾಗಿ, ಜೀರ್ಣಕ್ರಿಯೆ ಉತ್ತಮಗೊಂಡು, ಆಹಾರವು ಸರಿಯಾದ ರೀತಿಯಲ್ಲಿ ಜೀರ್ಣಗೊಳ್ಳುತ್ತದೆ.

ಆದರೆ ಇಂದ್ರಿಯಗಳಲ್ಲಿಯೇ ಜಡತ್ವವಿದ್ದರೆ ಅದು ಖಂಡಿತವಾಗಿಯೂ ಅಜೀರ್ಣದ ಲಕ್ಷಣ. ಅಂಥ ಸ್ಥಿತಿಯಲ್ಲಿ ಆಹಾರವನ್ನು ಸೇವಿಸಿದರೆ ಮತ್ತಷ್ಟು ತೊಂದರೆಯಾಗಿ ಆರೋಗ್ಯ ಹದಗೆಡುವುದು.

**ಮನಸ್ಸು ಸಂತೋಷದಿಂದಿರಬೇಕು:** ಆಯುರ್ವೇದದ ಪ್ರಕಾರ ಚಿಂತಾ, ಶೋಕ, ಭಯ, ಕ್ರೋಧ ಮತ್ತು ಉದ್ವೇಗಗಳು ಇದ್ದಾಗ ಆಹಾರ ಸೇವಿಸಿದರೆ ಅದು ಸರಿಯಾಗಿ ಜೀರ್ಣವಾಗುವುದಿಲ್ಲ. ಕಾರಣ, ನಮ್ಮ

ಭಾವನೆಗಳಿಗೂ ಮತ್ತು ನಮ್ಮ ಜೀರ್ಣಕ್ರಿಯೆಗೂ ನೇರವಾದ ಸಂಬಂಧವಿದೆ. ಮಾನಸಿಕ ಏರುಪೇರುಗಳಿಂದ ಜೀರ್ಣಕ್ರಿಯೆಯೂ ಏರುಪೇರು ಆಗುತ್ತದೆ.

ಅಂತೆಯೇ ಜೀರ್ಣಕ್ರಿಯೆ ಸರಿ ಇಲ್ಲದಿದ್ದಾಗ ಮಾನಸಿಕ ಅಸಮತೋಲನವು ಕಾಣಿಸಿಕೊಳ್ಳುತ್ತದೆ. ಹಾಗಾಗಿ ಒಳ್ಳೆಯ ಮನಸ್ಸಿನಿಂದ ಮತ್ತು ಉತ್ತಮ ಭಾವನೆಗಳೊಂದಿಗೆ ಆಹಾರವನ್ನು ಸೇವಿಸುವುದು ಸದಾ ಶ್ರೇಷ್ಠ. ಅಳುತ್ತಿರುವಾಗ, ಬೇರೆ ಯಾರ ಮೇಲೋ ಕೋಪಗೊಂಡಾಗ, ಯಾವುದೋ ವಿಷಯದ ಬಗ್ಗೆ ಅತಿಯಾಗಿ ಚಿಂತಿಸುತ್ತಿರುವಾಗ ಆಹಾರದಿಂದ ದೂರ ಇರುವುದೇ ಉತ್ತಮ.



**ಶುದ್ಧವಾದ ತೇಗು ಬರಬೇಕು:** ನಮ್ಮ ಜೀರ್ಣಾಂಗದಲ್ಲಿ ಮೊದಲು ಸೇವಿಸಿದ ಆಹಾರವು ಇನ್ನೂ ಜೀರ್ಣವಾಗದೆ ಇದ್ದರೆ ತೇಗು ಬಂದಾಗ ನಾವು ಮೊದಲು ಸೇವಿಸಿದ ಆಹಾರದ್ದೇ ವಾಸನೆ ಮತ್ತು ರುಚಿ ಇರುತ್ತವೆ. ಅಂಥ ತೇಗು ಬಂದಾಗ ಮತ್ತೆ ಆಹಾರ ಸೇವಿಸಬಾರದು. ತೇಗು ಸಂಪೂರ್ಣವಾಗಿ ಶುದ್ಧವಾಗಿದ್ದಾಗ ಮಾತ್ರ ಅದು ಆಹಾರ ಸೇವಿಸಲು ಯೋಗ್ಯ ಸಮಯ ಎಂದರ್ಥ. ಹಸಿವೆ ಇರಬೇಕು– ನಾವು ಪ್ರತಿ ಬಾರಿಯೂ ಆಹಾರ ಸೇವಿಸುವ ಮುನ್ನ ಗಮನಿಸಲೇ ಬೇಕಾದ ಲಕ್ಷಣವೆಂದರೆ ಹಸಿವು.

ಆಯುರ್ವೇದದ ಪ್ರಕಾರ ನಮಗೆ ಹಸಿವಿದ್ದಾಗ ಮಾತ್ರ ಆಹಾರವನ್ನು ಸೇವಿಸಬೇಕು. ನಾವು ಯಾವಾಗ ತಿನ್ನಬೇಕು ಎನ್ನುವ ಪ್ರಶ್ನೆಗೆ ಒಂದೇ ವಾಕ್ಯದಲ್ಲಿ ಉತ್ತರ ಕೊಡಬೇಕೆಂದರೆ, ಹಸಿವೆ ಇದ್ದಾಗ ಮಾತ್ರ ಆಹಾರ ಸೇವಿಸತಕ್ಕದ್ದು. ಕಾರಣ, ಶರೀರಕ್ಕೆ ಆಹಾರವು ಅಗತ್ಯವಿದ್ದಾಗ ಅದು ಹಸಿವೆ ಎಂಬ ಕರೆಯ ಮೂಲಕ ನಮಗೆ ಸೂಚನೆಯನ್ನು ನೀಡುತ್ತದೆ. ಆ ಸೂಚನೆಯ ಅರ್ಥವೇನೆಂದರೆ, ಜೀರ್ಣಾಂಗವ್ಯೂಹವು ಖಾಲಿಯಾಗಿದ್ದು ಈಗ ಸೇವಿಸುವ ಆಹಾರವನ್ನು ಸಂಪೂರ್ಣವಾಗಿ ಜೀರ್ಣಮಾಡಿಕೊಳ್ಳಲು ಸಿದ್ಧವಿದೆ ಎಂದರ್ಥ.

ನಮಗೆ ಹಸಿವಿಲ್ಲದಿದ್ದರೆ ಅದು ಆಹಾರವು ಇನ್ನೂ ಜೀರ್ಣಗೊಳ್ಳುತ್ತಿದೆ ಎಂಬುದರ ಸೂಚಕ. ಅಂಥ ಸಮಯದಲ್ಲಿ ಆಹಾರವನ್ನು ಪದೇಪದೆ ಸೇವಿಸುತ್ತಿದ್ದರೆ ಅದು ಸರಿಯಾಗಿ ಜೀರ್ಣಗೊಳ್ಳದೆ, ಅಗ್ನಿಯನ್ನು ಹಾಳು ಮಾಡಿ, ಬೇರೆ ಬೇರೆ ರೀತಿಯ ಕಾಯಿಲೆಗಳಿಗೆ ಕಾರಣವಾಗುತ್ತದೆ. ಆದ್ದರಿಂದ ಆಹಾರ ಸೇವಿಸುವ ಮುನ್ನ ಹಸಿವು ಎಂಬ ಲಕ್ಷಣ ಇರಲೇಬೇಕು.

**ವಾತಾನುಲೋಮನವಾಗಿರಬೇಕು:** ಜೀರ್ಣಕ್ರಿಯೆಯು ನಡೆಯುವ ಸಂದರ್ಭದಲ್ಲಿ ಇಡೀ ಜೀರ್ಣಾಂಗದಲ್ಲಿ ವಿವಿಧ ರೀತಿಯ ಚಲನೆಗಳು ಉಂಟಾಗುತ್ತವೆ. ಅಂತೆಯೇ, ನಾವು ಸೇವಿಸುವ ಆಹಾರದ ಗುಣಗಳಿಂದ ಜೀರ್ಣಾಂಗ ವ್ಯೂಹದಲ್ಲಿ ಒಂದು ರೀತಿಯ ಗಾಳಿಯು ಉತ್ಪತ್ತಿ ಯಾಗುತ್ತದೆ. ಈ ಗಾಳಿಯು ತೇಗಿನ ರೂಪದಲ್ಲಿ ಮೇಲ್ಮುಖ ವಾಗಿ ಹೊರಗೆ ಹೋಗುತ್ತದೆ ಮತ್ತು ಅಧೋವಾತದ ರೂಪದಲ್ಲಿ ಗುದಮಾರ್ಗದ ಮೂಲಕ ಹೊರಕ್ಕೆ ಹೋದಾಗ ಜೀರ್ಣಾಂಗವ್ಯೂಹವು ಮತ್ತೊಮ್ಮೆ ಆಹಾರವನ್ನು ಸ್ವೀಕರಿಸಿ ಅದನ್ನು ಪಚನ ಮಾಡಲು ಯೋಗ್ಯವಾಗಿದೆ ಎಂದು ನಾವು ತಿಳಿಯಬೇಕು.

ಸರಿಯಾದ ಸಮಯಕ್ಕೆ ವಾತಾನುಲೋಮನವು ಆಗದಿದ್ದರೆ ಹೊಟ್ಟೆ ಉಬ್ಬರ, ಹೊಟ್ಟೆ ನೋವು, ಹೊಟ್ಟೆ ಬಿಗಿತ, ಮಲಬದ್ಧತೆ, ತಲೆನೋವಿನಂಥ ವಿವಿಧ ರೀತಿಯ ತೊಂದರೆಗಳು ಕಾಣಿಸಿಕೊಳ್ಳಬಹುದು.

**ಜೀರ್ಣಶಕ್ತಿ ಉತ್ತಮವಾಗಿರಬೇಕು:** ನಾವು ಆಹಾರದಲ್ಲಿ ಘನ ಪದಾರ್ಥಗಳನ್ನು ಸೇವಿಸ ಬೇಕೆಂದರೆ ಅದಕ್ಕೆ ಉತ್ತಮ ಜೀರ್ಣಶಕ್ತಿಯ ಅವಶ್ಯಕತೆ ಇರುತ್ತದೆ. ಹಸಿವು ಸರಿಯಾದ ಸಮಯದಲ್ಲಿ ಆಗುತ್ತಿದೆಯೇ, ಸೇವಿಸಿದ ಆಹಾರವು ಯಾವುದೇ ತೊಂದರೆ ಇಲ್ಲದೆ ಜೀರ್ಣವಾಗುತ್ತಿದೆಯೇ ಎಂದು ಗಮನಿಸಿ, ನಂತರ ಯಾವ ರೀತಿಯ ಆಹಾರವನ್ನು ಸೇವಿಸಬೇಕು ಎಂದು ನಿರ್ಧರಿಸಬೇಕು. ಒಂದು ವೇಳೆ, ಜೀರ್ಣಕ್ರಿಯೆ ಉತ್ತಮವಾಗಿಲ್ಲವೆಂದರೆ ಗಂಜಿ/ಕಟ್ಟು ಸಾರು/ತೊವ್ವೆ/ ತಂಬುಳಿ ಮುಂತಾದ ತಿಳಿಯ ಪದಾರ್ಥಗಳನ್ನು ಸೇವಿಸುವುದು ಉತ್ತಮ.

ಮೇಲಿನ ಲಕ್ಷಣಗಳೆಲ್ಲವೂ ಕಂಡುಬಂದಾಗ ಅದೇ ಆಹಾರವನ್ನು ಸೇವಿಸಲು ಯೋಗ್ಯವಾದ ಕಾಲ. ನಮ್ಮ ಆಹಾರದ ಗುಣಗಳನ್ನು ಮತ್ತು ಪ್ರಮಾಣವನ್ನು ಸರಿಯಾಗಿ ಸಂಯೋಜಿಸಿಕೊಳ್ಳುವ ಮೂಲಕ, ಕೇವಲ ಎರಡು ಅಥವಾ ಮೂರು ಆಹಾರ ಕಾಲದಲ್ಲಿ ಮಾತ್ರ ಆಹಾರವನ್ನು ಸೇವಿಸಿ, ಅವುಗಳ ಮಧ್ಯೆ ಏನನ್ನೂ ತಿನ್ನದೆ ಅಥವಾ ಕುಡಿಯದೆ ಇದ್ದರೆ ಆಗ ಪ್ರತಿ ಆಹಾರ ಕಾಲದಲ್ಲಿಯೂ ಈ ಲಕ್ಷಣಗಳನ್ನು ಗಮನಿಸಬಹುದು.

ಈ ಲಕ್ಷಣಗಳನ್ನು ಸಾಧಿಸಿಕೊಂಡಾಗ ಮಾತ್ರ ನಾವು ಆಹಾರವನ್ನು ಸೇವಿಸುತ್ತಾ ಬಂದರೆ ನಮಗಿರುವ ಎಷ್ಟೋ ಆರೋಗ್ಯದ ಸಮಸ್ಯೆಗಳು ಯಾವುದೇ ಬೇರೆ ಪ್ರಯತ್ನ ಅಥವಾ ಔಷಧಿಗಳಿಲ್ಲದೆ ಶಮನವಾಗುವುದನ್ನು ನಾವು ಅನುಭವಿಸಬಹುದು.

ಇದರಿಂದ ಯಾವಾಗ ಆಹಾರವನ್ನು ಸೇವಿಸಬೇಕು ಎಂಬ ಪ್ರಶ್ನೆಗೆ ಉತ್ತರ ಸಿಕ್ಕಿತು. ಆದರೆ ಎಷ್ಟು ಸೇವಿಸಬೇಕು ಎನ್ನುವ ಪ್ರಶ್ನೆ ಇನ್ನೂ ಹಾಗೇ ಉಳಿದಿದೆ, ಅಲ್ಲವೇ? ಸ್ನೇಹಿತರೆ, ಸಾಮಾನ್ಯವಾಗಿ ನಾವು ಸೇವಿಸುವ ಆಹಾರವು ಘನ ಮತ್ತು ದ್ರವ ಎಂಬ ಎರಡು ಪ್ರಕಾರಗಿರುತ್ತದೆ. ನಮ್ಮ ಹೊಟ್ಟೆಯನ್ನು ಕಾಲ್ಪನಿಕವಾಗಿ ನಾಲ್ಕು ಭಾಗಗಳಾಗಿ ವಿಭಾಗಿಸಿದರೆ ಅದರಲ್ಲಿ ಅರ್ಧದಷ್ಟು ಘನ ಆಹಾರದಿಂದಲೂ, ಕಾಲುಭಾಗವನ್ನು ದ್ರವ ಆಹಾರದಿಂದಲೂ ತುಂಬಿಸಿ ಉಳಿದ ಕಾಲುಭಾಗವನ್ನು ಖಾಲಿ ಬಿಡತಕ್ಕದ್ದು.

ಹೀಗೆ ಖಾಲಿ ಬಿಡುವುದರಿಂದ ಆಹಾರವು ಸರಿಯಾಗಿ ಜೀರ್ಣವಾಗಲು ಸಹಕಾರಿಯಾಗುತ್ತದೆ. ಊಟದ ನಂತರದ ಹೊಟ್ಟೆಭಾರ, ಉಸಿರಾಟಕ್ಕೆ ತೊಂದರೆ, ಕುಳಿತುಕೊಳ್ಳಲು, ಓಡಾಡಲು, ನಿಂತು ಕೊಳ್ಳಲು ಕಷ್ಟವಾಗುವುದು, ಮುಂದಿನ ಆಹಾರದ ಕಾಲದ ಹೊತ್ತಿಗೆ ಹಸಿವೆ ಆಗದೆ ಇರುವುದು, ಶರೀರದಲ್ಲಿ ಆಲಸ್ಯ ಮತ್ತು ಜಡತ್ವ– ಇವುಗಳು ನಾವು ಸೇವಿಸಿದ ಆಹಾರದ ಪ್ರಮಾಣವು ಹೆಚ್ಚಾಯಿತು ಎಂದು ಸೂಚಿಸುತ್ತವೆ.

ಹೊಟ್ಟೆಯು ಸಂಪೂರ್ಣವಾಗಿ ತುಂಬಿದ ಲಕ್ಷಣ ಕಂಡುಬರುವ ಮುನ್ನವೇ ಅಂದರೆ ಹೊಟ್ಟೆಯಲ್ಲಿ ಇನ್ನೂ ಸ್ವಲ್ಪ ಜಾಗವಿದೆ ಎಂಬ ಭಾವನೆ ಇದ್ದಾಗಲೇ ಆಹಾರ ಸೇವನೆಯನ್ನು ನಿಲ್ಲಿಸುವುದು ಆರೋಗ್ಯ ರಕ್ಷಕವಾಗಿ ಪರಿಣಮಿಸುತ್ತದೆ. ಈ ರೀತಿಯಾಗಿ ಎಚ್ಚರದಿಂದ ಆಹಾರವನ್ನು ಸೇವಿಸುವುದರಿಂದ ಮಾತ್ರ ನಾವು ರೋಗಕಾರಕ ಆಹಾರವನ್ನು ಮಹಾಭೈಷಜ್ಯವನ್ನಾಗಿಸಬಹುದು!

**– ಡಾ.** ಸಾಧನಾಶ್ರೀ ಪಿ

### ಯಾವ ಆಹಾರ ಸೇವಿಸುವುದು ಶ್ರೇಷ್ಠ.....


- ಬೆಳಗ್ಗೆ ಎದ್ದ ಕೂಡಲೇ ಒಂದು ಲೀಟರ್‌ನಷ್ಟು ನೀರು, ಸ್ವಲ್ಪ ಹೊತ್ತು ಬಿಟ್ಟು ಒಂದು ಬಟ್ಟಲಿನಷ್ಟು ನೆನೆಸಿಟ್ಟ ಡ್ರೈ ಫ್ರೂಟ್ಸ್, ಸ್ವಲ್ಪ ಸಮಯದ ನಂತರ ರಾಗಿ ಗಂಜಿ/ಅಂಬಲಿ.
- ಇದಾದ ಮೇಲೆ ವ್ಯಾಯಾಮ.
- ವ್ಯಾಯಾಮದ ಮಧ್ಯೆ ಮಧ್ಯೆ ಜ್ಯೂಸ್ ಹೀರುವ ಅಭ್ಯಾಸ.
- ನಂತರ ಮನೆಯಲ್ಲಿ ಎಲ್ಲರಿಗೂ ತಯಾರಿಸಿದಂಥ ತಿಂಡಿಯ ಸೇವನೆ.
- ಜತೆಗೆ ಟೀ ಅಥವಾ ಕಾಫಿ ಇರಲೇಬೇಕು.
- ಒಂದೆರಡು ಗಂಟೆಗಳು ಕಳೆದ ಮೇಲೆ ಒಂದು ಬಟ್ಟಲಿನಷ್ಟು ಹಣ್ಣು. ಸ್ವಲ್ಪ ಹೊತ್ತಾದ ಮೇಲೆ ಸ್ಪ್ರೌಟ್ಸ್ ಅಥವಾ ಸಲಾಡ್.
- ಮಧ್ಯಾಹ್ನದ ಊಟವಂತೂ ಇದ್ದಿದ್ದೇ. ಊಟದ ನಂತರ ಸ್ವೀಟ್ ತಿನ್ನಬೇಕೆಂಬುವ ಚಪಲ.
- ಸುಮಾರು ನಾಲ್ಕೂವರೆ ಹೊತ್ತಿಗೆ ಟೀ ಜತೆಗೆ ಬಿಸ್ಕತ್ತು ಅಥವಾ ಖಾರದ ಯಾವುದಾದರೂ ಒಂದು ಕರಿದ ಪದಾರ್ಥ.
- ನಂತರ ವಾಕಿಂಗ್‌ಗೆ ಹೋಗಿ ಬಂದ ಮೇಲೆ ಯಾವುದಾದರೂ ಒಂದು ಪಾನೀಯ.
- ನಂತರದ ಪ್ರಾಣಾಯಾಮಾಭ್ಯಾಸವನ್ನು ಮುಗಿಸಿ ರಾತ್ರಿಯ ಊಟ.
- ಮಲಗುವ ಮುನ್ನ ಒಂದು ಲೋಟ ಹಾಲನ್ನು ಕುಡಿದರೆ ನಿದ್ದೆಗೆ ಒಳ್ಳೆಯದು ಎಂಬ ಗೆಳೆಯರ ಆದೇಶದಂತೆ ನಿತ್ಯವೂ ರಾತ್ರಿಯ ಸಮಯದಲ್ಲಿ ಕ್ಷೀರಪಾನ.

### ಆಹಾರವನ್ನು ಒಂದು ಮಹತ್ತರವಾದ ಔಷಧಿಯನ್ನಾಗಿ ಬದಲಾಯಿಸುವ ವಿಧಿ ಏನು?

- ಆಹಾರ ಸೇವನಾ ನಿಯಮವನ್ನು ಪಾಲಿಸುವುದು.
- ಆಯುರ್ವೇದದಲ್ಲಿ ಉಲ್ಲೇಖಿಸಿರುವ ಆಹಾರ ವಿಜ್ಞಾನದ ಬಗ್ಗೆ ಅರಿವು ಮೂಡಿಸಿಕೊಳ್ಳುವುದು.
- ನಮ್ಮ ಶಾಸ್ತ್ರದ ಆಹಾರ ವಿಜ್ಞಾನದಲ್ಲಿ ಯಾವಾಗ ತಿನ್ನಬೇಕು ಎಂಬ ಮುಖ್ಯವಾದ ಪ್ರಶ್ನೆಗೆ ಬಹಳ ವೈಜ್ಞಾನಿಕವಾದ ಉತ್ತರವನ್ನು ಕಾಣಬಹುದು.
- ಅದರಂತೆ, ಆಹಾರವನ್ನು ಸೇವಿಸುವ ಮುನ್ನ ಈ ಕೆಳಗೆ ಹೇಳಿದ ಲಕ್ಷಣಗಳು ಇವೆಯೇ ಎಂದು ಗಮನಿಸಬೇಕು.

### ಆಹಾರ ಸೇವಿಸುವ ಮುನ್ನ ಈ ಆರನ್ನು ಗಮನಿಸಿ....

- ಮಲ ಮೂತ್ರ ವಿಸರ್ಜನೆ ಆಗಿರಬೇಕು
- ಶರೀರವು ಲಘುವಾಗಿರಬೇಕು
- ಮನಸ್ಸು ಸಂತೋಷದಿಂದಿರಬೇಕು
- ಶುದ್ಧವಾದ ತೇಗು ಬರಬೇಕು
- ವಾತಾನುಲೋಮನವಾಗಿರಬೇಕು
- ಜೀರ್ಣಶಕ್ತಿ ಉತ್ತಮವಾಗಿರಬೇಕು



# ಪಾಸ್‌ಪೋರ್ಟ್‌ನ ಕಲರ್ ಕಲರ್ ಸ್ಟೋರಿ!

ಇದೇ ಡಿಸೈನಲ್ಲಿ ಬೇರೆ ಕಲರ್ ತೋರಿಸಿ ಅನ್ನೋ ಹೆಣ್ಣು ಮಕ್ಕಳು ಭಾರತದಲ್ಲಿ ಭಾರೀ ಫೇಮಸ್. ಆದರೆ ಪಾಸ್ ಪೋರ್ಟ್ ವಿಚಾರದಲ್ಲೂ ಈ ಹೆಣ್ಮಕ್ಕಳ ಫಾರ್ಮುಲಾ ಚಾಲ್ತಿಯಲ್ಲಿದೆಯಾ? ಪಾಸ್ ಪೋರ್ಟ್‌ನಲ್ಲಿ ವರ್ಣಭೇದ ನೀತಿ ಇದೆಯಾ? ವರ್ಣಭೇದ ನೀತಿ ಇಲ್ಲ. ಆದರೆ ಈ ಲೇಖನ ನಿಮಗೆ ವಿವಿಧ ಬಣ್ಣಗಳ ಪಾಸ್ ಪೋರ್ಟ್ ಬಗ್ಗೆ ವಿಶಿಷ್ಟ ಮಾಹಿತಿ ನೀಡಲಿದೆ. ಭಾರತದಲ್ಲಿ ವಿವಿಧ ಬಣ್ಣದ ಪಾಸ್ ಪೋರ್ಟ್ ಯಾಕೆ ಇವೆ? ಯಾವ್ಯಾವ ಬಣ್ಣದ ಪಾಸ್ ಪೋರ್ಟ್ ಇದೆ? ಯಾವ ಬಣ್ಣದ ಪಾಸ್ ಪೋರ್ಟ್ ಯಾವುದಕ್ಕೆ ಉಪಯುಕ್ತ? ಈ ಎಲ್ಲವನ್ನೂ ತಿಳಿಯುವ ಆಸಕ್ತಿ ಇದ್ದರೆ ಮುಂದೆ ಓದಿ.

ಒಂದು ದೇಶದಿಂದ ಮತ್ತೊಂದು ದೇಶಕ್ಕೆ ಹೋಗ್ಬೇಕು ಅಂದ್ರೆ ಪಾಸ್ ಪೋರ್ಟ್ ಅತ್ಯಗತ್ಯ. ಪಾಸ್ ಪೋರ್ಟ್ ಒಂದು ದೇಶದ ಸರಕಾರವು ತನ್ನ ಪ್ರಜೆಗೆ ನೀಡುವ ಅಧಿಕೃತ ದಾಖಲೆಯಾಗಿದ್ದು, ಇದು ವ್ಯಕ್ತಿಯ ಗುರುತನ್ನು ಮತ್ತು ರಾಷ್ಟ್ರೀಯತೆಯನ್ನು ದೃಢೀಕರಿಸಲು ಸಹಾಯ ಮಾಡುತ್ತದೆ. ವಿದೇಶಕ್ಕೆ ಪ್ರಯಾಣಿಸಲು ಇದು ಪ್ರೈಮರಿ ಲೈಸೆನ್ಸ್.

ವಿಶ್ವದ ನಕ್ಷೆಯಲ್ಲಿ 190 ಕ್ಕೂ ಹೆಚ್ಚು ದೇಶಗಳಿವೆ. ಪ್ರತಿಯೊಂದು ದೇಶವೂ ವಿವಿಧ ಬಣ್ಣಗಳಲ್ಲಿ ವಿದೇಶ ಪ್ರಯಾಣಕ್ಕಾಗಿ ಪಾಸ್ ಪೋರ್ಟ್‌ಗಳನ್ನು ರಚಿಸಿರುತ್ತದೆ. ಭಾರತದಲ್ಲಿ, ಹೊರಾಂಗಣ ವ್ಯವಹಾರಗಳ ಸಚಿವಾಲಯ ಪಾಸ್ ಪೋರ್ಟ್‌ಗಳನ್ನು ಬಿಡುಗಡೆ ಮಾಡುತ್ತದೆ. ಇದು ಭಾರತದ ನಾಗರಿಕರಿಗೆ ಜಾಗತಿಕವಾಗಿ ಪ್ರಯಾಣ ಮಾಡಲು ಅಧಿಕೃತ ದಾಖಲೆಗಳಾಗಿ ಕಾರ್ಯನಿರ್ವಹಿಸುತ್ತವೆ. ನಮ್ಮ ದೇಶದಲ್ಲಿ ಒಟ್ಟು 3 ರೀತಿಯ ಪಾಸ್ ಪೋರ್ಟ್‌ಗಳನ್ನು ನೀಡಲಾಗುತ್ತದೆ.

**ನೀಲಿ ಬಣ್ಣದ ಪಾಸ್ ಪೋರ್ಟ್ (ಸಾಮಾನ್ಯ ಪಾಸ್‌ಪೋರ್ಟ್):** ಇದೊಂದು ಸಾಮಾನ್ಯ ಪಾಸ್ ಪೋರ್ಟ್. ನೀಲಿ ಬಣ್ಣ ಹೊಂದಿರುವ ಈ ಪಾಸ್ ಪೋರ್ಟ್ ವಲಸೆ ಹೋಗುವವರಿಗೆ ಮತ್ತು ಕಸ್ಟಮ್ಸ್ ಅಧಿಕಾರಿಗಳಿಗೆ ನೀಡಲಾಗುತ್ತದೆ.

ಉನ್ನತ ಹುದ್ದೆಯಲ್ಲಿರುವ ಭಾರತದ ಸರಕಾರಿ ಅಧಿಕಾರಿಗಳ ನಡುವೆ ವ್ಯತ್ಯಾಸವನ್ನು ತಿಳಿಯಲು ಈ ಸಾಮಾನ್ಯ ಪಾಸ್ ಪೋರ್ಟ್ ಅವಕಾಶ ಮಾಡಿಕೊಡುತ್ತದೆ. ಜನಸಾಮಾನ್ಯರೂ ಬಳಸುವುದು ಇದೇ ಪಾಸ್ ಪೋರ್ಟ್. ಈ ಬಣ್ಣದ ಪಾಸ್ ಪೋರ್ಟ್ 10 ವರ್ಷಗಳವರೆಗೆ ಮತ್ತು ಮಕ್ಕಳಿಗೆ 5 ವರ್ಷಗಳವರೆಗೆ ಅಥವಾ ಅವರು 18 ವರ್ಷ ತುಂಬುವವರೆಗಿನ ಅವಧಿಯ ಗಡುವು ಹೊಂದಿರುತ್ತದೆ.

**ಕುಂಕುಮ ಬಣ್ಣದ ಪಾಸ್‌ಪೋರ್ಟ್ (ರಾಜತಾಂತ್ರಿಕ):** ಈ ಪಾಸ್ ಪೋರ್ಟ್‌ನ್ನು ಭಾರತದ ರಾಜತಾಂತ್ರಿಕರು ಮತ್ತು ಹಿರಿಯ ಸರಕಾರಿ ಅಧಿಕಾರಿಗಳಿಗೆ ಮಾತ್ರ ನೀಡಲಾಗುತ್ತದೆ. ಈ ಪಾಸ್‌ಪೋರ್ಟ್ ಹೊಂದಿರುವವರಿಗೆ ಕೆಲವು ವಿಶೇಷ ಸೌಲಭ್ಯಗಳು ಇರುತ್ತವೆ. ವಿಮಾನ ನಿಲ್ದಾಣಗಳಲ್ಲಿ ತ್ವರಿತ ನಿರ್ಗಮನದ ಸೌಲಭ್ಯ ಸೇರಿ ಹಲವಾರು ಪ್ರಯೋಜನಗಳು ಸಿಗುತ್ತವೆ. ಇನ್ನೂ ಇನ್ನೂ ಕೆಲವು ದೇಶಗಳಲ್ಲಿ ರಾಜತಾಂತ್ರಿಕ ರಕ್ಷಣೆ ಕೂಡ ಸಿಗುತ್ತದೆ. ವಿಶೇಷ ವಿಮಾನ ನಿಲ್ದಾಣದ ಲೌಂಜ್‌ಗಳಿಗೆ ಪ್ರವೇಶಾತಿ ಸಹ ದೊರಕುತ್ತದೆ. ಇದು ಸರಕಾರಿ ಉದ್ದೇಶಗಳಿಗಾಗಿ ವಿದೇಶ ಪ್ರವಾಸ ಮಾಡುವವರ ಅನುಕೂಲಕ್ಕಾಗಿ ನೀಡಲಾಗುತ್ತದೆ. ನಿಮಗೆ ನೆನಪಿದ್ದಿರಬಹುದು. ಸಂಸದ ಪ್ರಜ್ವಲ್ ರೇವಣ್ಣ ಭಾರತದಿಂದ ವಿದೇಶಕ್ಕೆ ಹಾರಲು ಬಳಸಿದ್ದು ಇದೇ ಡಿಪ್ಲೊಮೆಟಿಕ್ ಪಾಸ್ ಪೋರ್ಟ್.

**ಬಿಳಿ ಬಣ್ಣದ ಪಾಸ್‌ಪೋರ್ಟ್ (ಅಧಿಕೃತ ಪಾಸ್‌ಪೋರ್ಟ್):** ಅಧಿಕೃತ ಪ್ರಯೋಜನಕ್ಕಾಗಿ ನೀಡಲ್ಪಡುವ ವಿಶಿಷ್ಟ ದಾಖಲು ಇದಾಗಿದೆ. ಇದನ್ನು ಸಾಮಾನ್ಯವಾಗಿ ಸರಕಾರಿ ನೌಕರರು ಅಥವಾ ಅಧಿಕಾರಿಗಳು, ಸರಕಾರದ ಪರವಾಗಿ ಅಥವಾ ಸರಕಾರದ ಕೆಲಸಕ್ಕಾಗಿ ವಿದೇಶಕ್ಕೆ ಹೋಗುವಾಗ ಬಳಸುತ್ತಾರೆ. ಈ ಪಾಸ್ ಪೋರ್ಟ್ ಅನೇಕ ರೀತಿಯಿಂದ ಅಧಿಕಾರಿಗಳಿಗೆ ಪ್ರಯೋಜನಕಾರಿಯಾಗಿದೆ. ಜೊತೆಗೆ ಆರೋಗ್ಯ ಚಿಕಿತ್ಸೆಗೂ ಇದು ಪ್ರಯೋಜನಕಾರಿಯಾಗಿದೆ.

**ಕಿತ್ತಳೆ ಬಣ್ಣದ ಪಾಸ್ ಪೋರ್ಟ್:** ಕಿತ್ತಳೆ ಪಾಸ್‌ಪೋರ್ಟ್ ಇತ್ತೀಚೆಗೆ ಪರಿಚಯ ಮಾಡಲಾಗಿರುವ ಪಾಸ್‌ಪೋರ್ಟ್, 2018 ರಿಂದ ಭಾರತೀಯ ನಾಗರಿಕರಿಗೆ ನೀಡಲು ಪ್ರಾರಂಭಿಸಲಾಯಿತು. ಶೈಕ್ಷಣಿಕ ಅರ್ಹತೆ ಅಂದರೆ 10 ನೇ ತರಗತಿಯನ್ನು ಪೂರ್ತಿ ಮಾಡಿರದ ಜನರಿಗೆ ಈ ಪಾಸ್‌ಪೋರ್ಟ್ ನೀಡಲಾಗುತ್ತದೆ.

**– ಲೋಕೇಶ್,** ಬೆಂಗಳೂರು



# ಭಾವ ಲಹರಿ

# ಶಾಪದ ಅಗ್ನಿಕುಂಡದಲ್ಲಿ ಅರಳಿದ ಕೆಂಡಗಳು

ಮಹಾಭಾರತವನ್ನು ನೀವು ಆದಿಯಿಂದ ನೋಡುತ್ತ ಹೋದರೆ ಕೊನೆಯವರೆಗೂ ನೂರಾರು ಶಾಪಗಳೂ, ನೂರಾರು ವರಗಳೂ ಕಾಣಸಿಗುತ್ತವೆ. ಮಹಾಭಾರತ ಕತೆಯ ಮೊದಲ ರಾಜ ಶಂತನು ವಿನ ಜನನ ಆದುದು ಒಂದು ಶಾಪದಿಂದ. ಕೊನೆಯಲ್ಲಿ ಪಾಂಡವರ ಮೊಮ್ಮಗ ಪರೀಕ್ಷಿತನ ಅಂತ್ಯವಾದುದೂ ಒಂದು ಶಾಪದಿಂದ. ಈ ಶಾಪ ಮತ್ತು ವರಗಳ ಇತಿವೃತ್ತ ನೋಡುತ್ತ ಹೋದರೆ ನಮಗೆ ಸಾಕಷ್ಟು ಒಳನೋಟಗಳು ಸಿಕ್ಕುತ್ತವೆ.

ಬ್ರಹ್ಮಲೋಕದಲ್ಲಿ ಬ್ರಹ್ಮನ ಸಭೆ ನಡೆದಿತ್ತು. ಸೂರ್ಯವಂಶ ಚಂದ್ರವಂಶಗಳ ಹಿಂದಿನ ರಾಜರು, ಪುಣ್ಯ ಮಾಡಿ ಬ್ರಹ್ಮಲೋಕ ಸೇರಿದವರೂ, ನಾನಾ ದೇವತೆಗಳೂ ಅಲ್ಲಿದ್ದರು. ಹಾಗಿದ್ದವನೊಬ್ಬ ಮಹಾಭಿಷ. ಇವನು ಇಕ್ಷ್ವಾಕು ವಂಶದ ರಾಜ. ಸಾವಿರಾರು ರಾಜಸೂಯ, ಅಶ್ವಮೇಧ ಮಾಡಿ ಸ್ವರ್ಗ ಸೇರಿದ್ದವನು. ಅಂದು ಅವನ ಗ್ರಹಚಾರ ಕೆಟ್ಟಿತ್ತು. ದೇವನದಿ ಗಂಗೆ ಸಭೆಯಲ್ಲಿ ನಡೆದು ಬಂದಳು. ಗಾಳಿ ಬೀಸಿತು, ಆಕೆಯ ಸೆರಗು ಸರಿಯಿತು. ಎಲ್ಲರೂ ಆಕೆಯನ್ನು ನಗ್ನವಾಗಿ ನೋಡಬಾರದು ಎಂಬ ಎಚ್ಚರದಿಂದ ಕಣ್ಣು ಮುಚ್ಚಿಕೊಂಡರು. ಗಂಗೆಯ ಸೌಂದರ್ಯದಲ್ಲಿ ಕಣ್ಣು ನೆಟ್ಟಿದ್ದ ಮಹಾಭಿಷ ರೆಪ್ಪೆ ಮುಚ್ಚಲಿಲ್ಲ. ಇದು ಬ್ರಹ್ಮನಿಗೆ ಗೊತ್ತಾಯಿತು. ಸಿಟ್ಟಿನಿಂದ ನೀನು ಭೂಮಿಯಲ್ಲಿ ಮತ್ತೆ ಜನಿಸು ಎಂದು ಶಾಪ ಕೊಟ್ಟ. ಹಾಗೆ ಚಂದ್ರವಂಶದ ದೊರೆ ಪ್ರತೀಪನಲ್ಲಿ ಜನಿಸಿದವನು ಶಂತನು.

ಆದರೆ ಹಾಗೆ ಭೂಮಿಗೆ ಬರುವಾಗ ಮಹಾಭಿಷ ಗಂಗೆಯನ್ನೂ ಬಿಡಲಿಲ್ಲ. ನನ್ನದು ತಪ್ಪಾಯಿತು, ನಿಜ. ಒಪ್ಪಿಕೊಳ್ಳುತ್ತೇನೆ. ನನ್ನ ಶಿಕ್ಷೆಯನ್ನು ಸ್ವೀಕರಿಸುತ್ತೇನೆ. ಆದರೆ ಇದರಲ್ಲಿ ಗಂಗೆಯದೂ ಸ್ವಲ್ಪ ಪಾಲಿದೆ. ಅವಳೂ ಮೈಮರೆತಿದ್ದಳು. ಆಕೆಯೂ ನನ್ನ ಜೊತೆ ಭೂಮಿಗೆ ಬರಲಿ. ನನ್ನ ಜೊತೆ ಸಂಸಾರ ಮಾಡಲಿ ಎಂದ. ಬ್ರಹ್ಮ ಯಾವ

ಮೂಡ್‌ನಲ್ಲಿದ್ದನೋ, ಗಂಗೆಗೂ ನೀನೂ ಭೂಮಿಗೆ ಹೋಗು ಎಂದು ಆದೇಶಿಸಿದ. ಗಂಗೆ ದಾರಿಯಲ್ಲಿ ಹೋಗುತ್ತಿರುವಾಗ ದಾರಿಯಲ್ಲಿ ಎಂಟು ಮಂದಿ ವಸುಗಳು ಸಿಕ್ಕಿದರು. ಇವರು ದೇವತೆಗಳ ಒಂದು ವರ್ಗ.

ಸಂಜೆಗತ್ತಲಲ್ಲಿ ನಡೆಯುವಾಗ ವಸಿಷ್ಠರನ್ನು ಕಾಣದೆ ತುಳಿದು, ಮನುಷ್ಯರಾಗಿ ಹುಟ್ಟಿ ಎಂದು ಅವರಿಂದ ಶಪಿತರಾಗಿದ್ದವರು ಅವರು. ಗಂಗೆ ಮತ್ತು ಅವರ ನಡುವೆ ಸಂವಾದ ನಡೆಯಿತು. ನಾವು ಯಾವುದೋ ಮನುಷ್ಯರ ಗರ್ಭದಲ್ಲಿ ಜನಿಸಲು ಒಲ್ಲೆವು. ಹುಟ್ಟಿದರೆ ನಿನ್ನಂಥ ಪವಿತ್ರಾತ್ಮಳ ಗರ್ಭದಲ್ಲಿ ಹುಟ್ಟುವೆವು. ಒಪ್ಪಿಗೆ ನೀಡು ಎಂದರು. ಗಂಗೆ ಒಪ್ಪಿದಳು. ಜೊತೆಗೇ ಒಂದು ಶರತ್ತು ಹಾಕಿದರು- ನಮಗೆ ಭೂಮಿಯಲ್ಲಿ ನರಳುತ್ತಾ ಬದುಕಲು ಇಷ್ಟವಿಲ್ಲ. ಹುಟ್ಟಿದ ಕೂಡಲೇ ನಮ್ಮನ್ನು ನೀರಿನಲ್ಲಿ ಮುಳುಗಿಸಿ ಸಾಯಿಸು. ಗಂಗೆ ಅದಕ್ಕೂ ಒಪ್ಪಿದಳು.

ಹೀಗೆ ಮಹಾಭಿಷ ಶಂತನುವಾಗಿ ಜನಿಸಿದ. ಗಂಗೆ ಅವನಿಗಿಂತ ಮೊದಲು ನದಿಯಾಗಿ ಭೂಮಿಗೆ ಬಂದಳು. ಒಂದು ಸಲ ಶಂತನು ನದಿದಡದಲ್ಲಿ ಸಂಚರಿಸುತ್ತಿದ್ದಾಗ ಆಕೆಯನ್ನು ಕಂಡು, ಮೋಹ ಗೊಂಡ. ಮದುವೆಯಾಗುತ್ತೇನೆ ಎಂದ, ಆಗಲಿ, ಆದರೆ ನಾನು ಏನೇ ಮಾಡಿದರೂ ನೀನು ಅದನ್ನು ಪ್ರಶ್ನಿಸಬಾರದು. ಪ್ರಶ್ನಿಸಿದರೆ ಈ ಸಂಬಂಧ ಕಡಿದುಕೊಳ್ಳುವ ಹಕ್ಕು ನನ್ನದಾಗಿ ಇರುತ್ತದೆ



ಎಂದು ಶರತ್ತು ಹಾಕಿದಳು. ಶಂತನು ಸರಿ ಎಂದ. ಹೀಗೆ ಮದುವೆಯಾಯಿತು.

ಒಂದೊಂದಾಗಿ ಮಕ್ಕಳು ಜನಿಸಿದವು. ಏಳು ಮಕ್ಕಳು, ಹುಟ್ಟಿದ ಕೂಡಲೇ ಗಂಗೆ ಅವುಗಳನ್ನು ತೆಗೆದುಕೊಂಡು ಹೋಗಿ ನದಿಯಲ್ಲಿ ಮುಳುಗಿಸಿ ಕೊಂದಳು. ಈ ಉಲ್ಲೇಖಕ್ಕೆ ಏನೇನು ಅರ್ಥ ಗಳಿವೆಯೋ. ಗಂಗೆ, ಶಿಶುಗಳನ್ನು ಗಂಗಾನದಿಯಲ್ಲೇ ಮುಳುಗಿಸಿ ಕೊಲ್ಲುವುದು ಎಂದರೇನರ್ಥ? ಬಹುಶಃ ಅವು ಹುಟ್ಟುವಾಗಲೇ ಸತ್ತಿರಬೇಕು. ಬಹುಶಃ ಶಂತನು- ಗಂಗೆಯರದು ಅನುರೂಪ ದಾಂಪತ್ಯ ಆಗಿರಲಿಲ್ಲ. ಅದು ಗಂಗೆ- ಶಂತನುಗಳಿಬ್ಬರ ಅಗತ್ಯಕ್ಕೆ ದಕ್ಕಿದ ದಾಂಪತ್ಯ. ಇಬ್ಬರ ಶಾಪದಿಂದ, ನೋವು ಸಂಕಟಗಳಿಂದ ಮುಕ್ತಿ ಪಡೆಯಲು ಮಾಡಿ ಕೊಂಡ ದಾಂಪತ್ಯ. ಬಹುಶಃ ಅದರಲ್ಲಿ ಸಿಹಿಗಿಂತ ಕಹಿಯೇ ಅಧಿಕ ಇದ್ದಿರಬೇಕು. ಇಬ್ಬರೂ ಮುಕ್ತವಾಗಿ ಮಾತಾಡಿಕೊಳ್ಳುತ್ತಿರಲಿಲ್ಲ. ಹಾಗೆ ಮಾತಾಡಿಕೊಂಡಿದ್ದರೆ ಅವಳು ಶಿಶುಗಳನ್ನು ನೀರಿಗೆ ಎಸೆಯುವ ಹಿನ್ನೆಲೆ ಅವನಿಗೆ ತಿಳಿದಿರುತ್ತಿತ್ತು. ಆಕೆಯನ್ನು ಖಂಡಿಸುವ ಯೋಚನೆ ಹುಟ್ಟುತ್ತಿರಲಿಲ್ಲ.

ಎಂಟನೇ ಮಗು ಆಗುವ ಹೊತ್ತಿಗೆ ಶಂತನುವಿನ ಸಹನೆ ಸತ್ತಿತ್ತು. ಶಂತನು ಆಕೆಯ ರಟ್ಟೆ ಹಿಡಿದು ಯಾಕೆ ಹೀಗೆ? ಎಂದು ಅಬ್ಬರಿಸಿದ. ಅಷ್ಟೇ ಸಾಕಾಯಿತು. ಗಂಗೆಗೂ ಈ ಮನುಷ್ಯ ಬದುಕು, ಸಂಸಾರ ಸಾಕೆನಿಸಿತ್ತು. ಸರಿ, ನಿನಗೆ ಮಗು ಬೇಕು ತಾನೆ? ನೀನೇ ಇಟ್ಟುಕೋ. ಆದರೆ ನೀನು ನನ್ನನ್ನು ಪ್ರಶ್ನಿಸಿದೆ, ತಡೆದೆ, ಖಂಡಿಸಿದೆ. ಹೀಗಾಗಿ ನಾನು ಹೊರಟೆ ಎಂದು ಹೇಳಿ, ತಮ್ಮಿಬ್ಬರ ಪೂರ್ವಜನ್ಮದ ಕತೆಯನ್ನೂ ಅವನಿಗೆ ಹೇಳಿ, ಅಲ್ಲಿಂದ ಹೊರಟಳು. ಹೊರಡುವಾಗ ಮಗನಿಗೆ ಶಿಕ್ಷಣ ಕಲಿಸಿ ಮರಳಿ ಕಳಿಸುತ್ತೇನೆ ಎಂದು ತಿಳಿಸಿ ಅವನನ್ನೂ ಕರೆದೊಯ್ದಳು. ಅವನು ದೇವವ್ರತ. ನಂತರ ಭೀಷ್ಮನಾದವನು. ಅವನೂ ಶಪಿತ ವಸು.

ಮಹಾಭಾರತದ ಕೊನೆಗೆ ಬನ್ನಿ. ಕುರುಕ್ಷೇತ್ರ ಯುದ್ಧವೆಲ್ಲ ಮುಗಿದು, ಧರ್ಮರಾಯ ಮೂವತ್ತಾರು ವರ್ಷಗಳ ಸುಭಿಕ್ಷ ಆಡಳಿತ ನಡೆಸಿದ. ನಂತರ ಅಭಿಮನ್ಯುವಿನ ಪುತ್ರ, ಉತ್ತರೆಯ ಮಗ ಪರೀಕ್ಷಿತನಿಗೆ ಪಟ್ಟ ಕಟ್ಟಿ ಪಾಂಡವರು ಸ್ವರ್ಗಾರೋಹಣಕ್ಕೆ ಹೊರಟುಹೋದರು. ಇವನೂ ಹುಟ್ಟುವ ಮೊದಲೇ ಸಾಯಬೇಕಿತ್ತು. ಅಶ್ವತ್ಥಾಮನ ಬ್ರಹ್ಮಾಸ್ತ್ರಕ್ಕೆ ತುತ್ತಾಗಿದ್ದ. ಆದರೆ ಕೃಷ್ಣನ ಹಸ್ತಕ್ಷೇಪದಿಂದ ಬದುಕಿದ. ಹರಿಭಕ್ತ ಪರೀಕ್ಷಿತ ಹಲವಾರು ವರ್ಷ ಸೊಗಸಾದ ಆಡಳಿತ ನಡೆಸಿದ. ಆಗಷ್ಟೇ ದ್ವಾಪರ ಮುಗಿದು, ಕಲಿ ಕಾಲೂರಲು ಹವಣಿಸುತ್ತಿದ್ದ. ಆದರೆ ಧರ್ಮರಾಯನಂತೆಯೇ ಪರೀಕ್ಷಿತನೂ ಕಲಿಯನ್ನು ಭೂಮಿಯ ಮೇಲೆ ಕಾಲಿಡದಂತೆ ಗದರಿಸಿ ಆಚೆ ಇಟ್ಟಿದ್ದ.

ಒಮ್ಮೆ ಇವನು ಬೇಟೆಗೆ ಕಾಡಿಗೆ ಹೋದ. ಸುತ್ತಾಡಿ ಬಳಲಿ, ಶಮೀಕರೆಂಬ ಮುನಿಯ ಆಶ್ರಮದ ಹತ್ತಿರ ಬಂದ. ರಾಜ ಬಂದದ್ದನ್ನು ಧ್ಯಾನದಲ್ಲಿ ಇದ್ದ ಮುನಿ ಗಮನಿಸಲಿಲ್ಲ, ಪರೀಕ್ಷಿತನಿಗೆ ಅವಮಾನವೆನಿಸಿತು. ವಿವೇಕ ಕೈಕೊಟ್ಟಿತು. ಅವಿವೇಕವೇ ನಾಶದ ಮೂಲ. ಕೋಪ ಬಂತು. ಅಲ್ಲಿಯೇ ಸತ್ತು ಬಿದ್ದಿದ್ದ ಒಂದು ಹಾವನ್ನು ತಂದು ರಾಜ ಬಂದರೂ ಸತ್ತಂತೆ ಸುಮ್ಮನಿರುವ ನಿನಗೆ ಸತ್ತ ಸರ್ಪವೇ ಸಮ್ಮಾನ ಎಂದು ಮುನಿಯ ಕೊರಳಿಗೆ ಹಾಕಿ ಹೊರಟುಹೋದ. ಸ್ವಲ್ಪ ಹೊತ್ತಿನಲ್ಲಿ ಮುನಿಯ ಮಗ ಶೃಂಗಿ ಅಲ್ಲಿಗೆ ಬಂದು ನೋಡಿದ.

ತಂದೆಯ ಕೊರಳಲ್ಲಿ ಹಾವು ನೋಡಿ ಕ್ರೋಧ ವಶನಾದ. ನನ್ನ ತಂದೆಯ ಕೊರಳಿಗೆ ಸತ್ತ ಹಾವನ್ನು ಹಾಕಿ ಅಪಮಾನ ಮಾಡಿದವನು ಇಂದಿನಿಂದ ಏಳು ದಿನಗಳೊಳಗಾಗಿ ತಕ್ಷಕ ಸರ್ಪ ಕಚ್ಚಿ ಸಾಯಲಿ ಎಂದು ಶಾಪ ನೀಡಿದ. ಎಚ್ಚರಗೊಂಡ ಶಮೀಕರಿಗೆ ಅನಾಹುತದ ಅರಿವಾಯಿತು. ಪರೀಕ್ಷಿತನ ಅವಿವೇಕಕ್ಕೂ ಮಗನ ದುಡುಕಿಗೂ ಬೇಸರಿಸಿದರು. ಹೀಗೊಂದು ಶಾಪ ರಾಜನಿಗೆ ಬಿದ್ದಿದೆ ಎಂಬ ವಾರ್ತೆಯನ್ನು ರಾಜನಿಗೆ ಕಳುಹಿಸಿದ.

ಈಗ ಪರೀಕ್ಷಿತನಿಗೆ ನಿಶ್ಚಿತವಾದ ಸಾವನ್ನು ಗೆಲ್ಲುವ ಹಠ ಮೂಡಿತು. ಸಾವು ಹೇಗೆ ಬಳಿ ಬರುವುದೋ ನೋಡೋಣ ಎಂಬ ಹಠವೂ ಮೂಡಿತು. ಸಮುದ್ರದ ನಡುವೆ ಒಂದು ಎತ್ತರವಾದ ಸ್ತಂಭವನ್ನು ರಚಿಸಿ, ಅದರ ಮೇಲುಗಡೆ ರಾಜಭವನ ಕಟ್ಟಿಸಿ, ಸುತ್ತಲೂ ಬಿಚ್ಚುಗತ್ತಿಯ ಭಟರ ಕಾವಲು ಇಟ್ಟು, ತಾನು ಭವನದ ಒಳಗೆ ಬಚ್ಚಿಟ್ಟುಕೊಂಡ. ಸರ್ಪಗಳು ಸಮುದ್ರದ ಉಪ್ಪು ನೀರಿನಲ್ಲಿ ಬರಲಾರವು, ಬಂದರೂ ಭಟರು ಕೊಲ್ಲುತ್ತಾರೆ ಎಂಬ ಯೋಚನೆ.

ಆದರೆ ಸರ್ಪರಾಜ ತಕ್ಷಕನಿಗೆ ಋಷಿಗಳ ಶಾಪವನ್ನು ಈಡೇರಿಸಲೇಬೇಕಾದ ವಿಧಿಯಿತ್ತು. ಅವನು ಪರೀಕ್ಷಿತ ಮಹಾರಾಜನನ್ನು ಕಾಣಲು ಬರುವ ಋಷಿಗಳ ಗುಂಪಿನಲ್ಲಿ, ಅವರು ತಂದ ಹಣ್ಣು ಹಂಪಲಿನಲ್ಲಿ ಒಂದು ಹುಳವಾಗಿ ಸೇರಿಕೊಂಡ. ಪರೀಕ್ಷಿತ ಅರಮನೆಯಲ್ಲಿ ಒಂಟಿಯಾಗಿದ್ದ. ಹುಳ ಹಣ್ಣಿನಿಂದ ಹೊರಬಂದು ಬೃಹದಾಕಾರವಾಗಿ ಬೆಳೆದು ಹೆಡೆ ತೆರೆದ. ಕೊನೆ ಬಂತೆಂದು ಪರೀಕ್ಷಿತನಿಗೆ ಅರ್ಥವಾಯಿತು. ಸಾವನ್ನು ತೆರೆದ ಕೈಗಳಿಂದ ಸ್ವಾಗತಿಸಿದ.

ಇಲ್ಲಿಗೆ ಶಾಪದ ಸರಣಿ ಮುಗಿಯಿತು ಎಂದುಕೊಂಡಿರಾ? ಇಲ್ಲ, ಮುಂದೆ ಪರೀಕ್ಷಿತನ ಮಗ ಜನಮೇಜಯ ರಾಜನಾದ. ನಿನ್ನ ತಂದೆಯ ಮರಣಕ್ಕೆ ಕಾರಣನಾದವನು ತಕ್ಷಕ. ಅವನು ಸರ್ಪ. ಸರ್ಪಗಳಿಗೆ ಕೃತಜ್ಞತೆಯಿಲ್ಲ, ಅವು ಕ್ಷುದ್ರಜೀವಿಗಳು.

**■ ಬ್ರಹ್ಮಲೋಕದಲ್ಲಿ ಬ್ರಹ್ಮನ ಸಭೆ ನಡೆದಿತ್ತು. ಸೂರ್ಯವಂಶ ಚಂದ್ರವಂಶಗಳ ಹಿಂದಿನ ರಾಜರು, ಪುಣ್ಯ ಮಾಡಿ ಬ್ರಹ್ಮಲೋಕ ಸೇರಿದವರೂ, ನಾನಾ ದೇವತೆಗಳೂ ಅಲ್ಲಿದ್ದರು. ಹಾಗಿದ್ದವನೊಬ್ಬ ಮಹಾಭಿಷ. ಇವನು ಇಕ್ಷ್ವಾಕು ವಂಶದ ರಾಜ. ಸಾವಿರಾರು ರಾಜಸೂಯ, ಅಶ್ವಮೇಧ ಮಾಡಿ ಸ್ವರ್ಗ ಸೇರಿದ್ದವನು. ಅಂದು ಅವನ ಗ್ರಹಚಾರ ಕೆಟ್ಟಿತ್ತು.**

ಅವುಗಳನ್ನು ಬಿಡಬೇಡ ಎಂದು ಯಾರೋ ಅವನಿಗೆ ಚಾಡಿ ಹೇಳಿದರು. ಅವನು ಸಿಟ್ಟಿನಿಂದ, ಸರ್ಪಕುಲದ ಮೇಲೆಯೇ ಸೇಡು ತೀರಿಸಿಕೊಳ್ಳಲು ಮುಂದಾದ. ಸರ್ಪಯಜ್ಞವನ್ನು ಸಂಕಲ್ಪಿಸಿ, ಅದಕ್ಕೆ ಸೂಕ್ತ ಋತ್ವಿಜರನ್ನು ಕರೆಸಿ ಆರಂಭಿಸಿಯೇ ಬಿಟ್ಟ. ಇವನು ಆರಂಭಿಸಿದ ಯಜ್ಞಕ್ಕೆ ಸರ್ಪಗಳು, ನಾಗಗಳು ತಾವಾಗಿ ಬಂದು ತುಪತುಪನೆ ಯಜ್ಞಕುಂಡಕ್ಕೆ ಬಿದ್ದು ಬೆಂದುಹೋದವು.

ಸರ್ಪಗಳು ಹೀಗೆ ಯಜ್ಞಕ್ಕೆ ಆಹುತಿಯಾಗಲು ಕಾರಣವೇನು? ಅದರ ಹಿನ್ನೆಲೆಯಲ್ಲೂ ಒಂದು ಶಾಪದ ಕತೆಯಿದೆ. ಕದ್ರು ಹಾಗೂ ವಿನತೆಯರು ಮುನಿ ಕಶ್ಯಪರ ಪತ್ನಿಯರು. ಕದ್ರು ಸರ್ಪಗಳ ತಾಯಿಯಾದರೆ, ವಿನತೆಯ ಮಗ ಗರುಡ. ಒಮ್ಮೆ ಕದ್ರು ಮತ್ತು ವಿನತೆಯರ ನಡುವೆ ಇಂದ್ರನ ಕುದುರೆಯಾದ ಉಚ್ಚೈಶ್ರವಸ್ಸಿನ ಬಾಲದ ಬಣ್ಣದ ಬಗ್ಗೆ ತಗಾದೆಯಾಯಿತು. ಅದು ಸಂಪೂರ್ಣವಾಗಿ ಬಿಳಿಯೇ. ವಿನತೆ ಹಾಗೇ ಹೇಳಿದಳು. ಆದರೆ ಕದ್ರು, ಅದು ಕಪ್ಪು ಎಂದು ಹಠ ಹಿಡಿದಳು. ಪಂಥ ಉಂಟಾಯಿತು. ಪಂಥದಲ್ಲಿ ಸೋತವರು ಇನ್ನೊಬ್ಬರಿಗೆ ಗುಲಾಮರಾಗಬೇಕು. ಕದ್ರು ತನ್ನ ಮಕ್ಕಳಾದ ಸರ್ಪಗಳನ್ನು ಕರೆದು ಕುದುರೆಯ ಬಾಲದಲ್ಲಿ ನೇತಾಡಿ ಅದನ್ನು ಕಪ್ಪಾಗಿ ಕಾಣಿಸಲು ಆದೇಶಿಸಿದಳು. ಸರ್ಪಗಳು ಒಪ್ಪಲಿಲ್ಲ. ಕದ್ರು ಅವರೆಲ್ಲರಿಗೂ, ಜನಮೇಜಯನ ಸರ್ಪ ಯಾಗದಲ್ಲಿ ಸುಟ್ಟುಹೋಗುವಂತೆ ಶಪಿಸಿದಳು.

ಇಷ್ಟಕ್ಕೂ ಶಾಪ ಎಂದರೇನು? ಹಾಗೊಂದು ನಿಜಕ್ಕೂ ಉಂಟೇ ಎಂಬ ವಿಚಾರ ಎತ್ತಿಕೊಂಡು ತರ್ಕಕ್ಕೆ ಹೊರಟರೆ ನಾವು ತುದಿ ಮುಟ್ಟಲಾರೆವು. ನೊಂದ ಹೃದಯದ ಸಿಟ್ಟಿನ ಮಾತೇ ಶಾಪ ಎಂದು ಬೇಕಿದ್ದರೆ ಸರಳವಾಗಿ ಹೇಳಿಬಿಡಬಹುದು. ಮೈಸೂರು ಅರಸರ ಸಂಬಂಧವಾಗಿ ಒಂದು ಶಾಪದ ಕತೆ ಹೇಳುತ್ತಾರೆ. ಅಲಮೇಲಮ್ಮನ ಶಾಪದ ಫಲ ಇಂದಿಗೂ ಕಾಣಸಿಗುತ್ತದೆ ಎನ್ನುತ್ತಾರೆ. ಮೈಸೂರು ಅರಸು ವಂಶದ ಕುಡಿಗಳಲ್ಲಿ ಯಾರಿಗೂ ಮಕ್ಕಳಿಲ್ಲ ಎನ್ನುವುದೂ, ದತ್ತು ತೆಗೆದು ಕೊಂಡವರಿಗೆ ಮಾತ್ರ ಮಕ್ಕಳಾಗಿದೆ ಎನ್ನುವುದನ್ನೂ ಆಧಾರವಾಗಿ ಒದಗಿಸುತ್ತಾರೆ.

ತನ್ನ ಮೇಲೆ ಒಂದು ಶಾಪವಿದೆ ಎಂದು ಪ್ರತಿ ಮನುಷ್ಯನೂ ನಂಬುತ್ತಾನೆ. ನೀನು ಉದ್ಧಾರ ಆಗಲ್ಲ, ನೀನು ಚೆನ್ನಾಗಿಲ್ಲ, ನೀನು ನಾಶ ಆಗ್ತೀಯ, ನಿನಗೆ ಇಂಗ್ಲಿಷ್ ಬರೋಲ್ಲ, ಹೀಗೆಲ್ಲ ಈ ಶಾಪಗಳು. ಇವು ತಂದೆ ತಾಯಿಯಿಂದಲೋ, ಶಿಕ್ಷಕರಿಂದಲೋ ಬಂದಿರುತ್ತವೆ. ಪ್ರತಿಯೊಬ್ಬನೂ ಅದನ್ನು ಮೀರಲೂ ಹೇಗೆಹೇಗೋ ಯತ್ನಿಸುತ್ತಾ ಇರುತ್ತಾನೆ. ನಮ್ಮ ಬದುಕಿನಲ್ಲೂ ಇಂಥ ಶಾಪದ ಮಹಾ ಭಾರತಗಳಿರುತ್ತವೆ. ಅಲ್ಲಿರುವ ಇನ್ನಷ್ಟು ಶಾಪದ ಕತೆಗಳನ್ನು ಇನ್ನೊಮ್ಮೆ ನೋಡೋಣ.

– **ಹರೀಶ್** ಕೇರ

## ಯೋಗಾಭ್ಯಾಸ ಹಾಗೂ ಪ್ರಾಣಾಯಾಮದ ಮಹತ್ವ

ಇಂದು ಎಲ್ಲರೂ ಒತ್ತಡದಲ್ಲಿ ಜೀವಿಸುತ್ತಿದ್ದಾರೆ. ಬೆಳಿಗ್ಗೆ ಎದ್ದ ತಕ್ಷಣ ಪ್ರಾರಂಭವಾಗುವ ಒತ್ತಡ ನಾವು ಹಾಸಿಗೆಯಲ್ಲಿ ಮಲಗುವವರೆಗೂ ಇರುತ್ತದೆ. ಅಲ್ಲದೆ ಮನುಷ್ಯನ ಆಸೆ-ಆಕಾಂಕ್ಷೆಗಳು ಮತ್ತು ಮಹತ್ವಾಕಾಂಕ್ಷೆಗೆಗಳು ನಿರೀಕ್ಷೆಯನ್ನು ಮಿತಿಮೀರಿ ಬೆಳೆಯುತ್ತಿರುವುದರಿಂದ, ಮನುಷ್ಯ ಸಹಜವಾಗಿ ಒತ್ತಡಕ್ಕೆ ಒಳಗಾಗುತ್ತಿದ್ದಾನೆ. ದುಡಿದು ತಂದ ಹಣ ಯಾವುದಕ್ಕೂ ಸಾಲವಾಗಿದೆ. ಅನೇಕರು ಸಾಲದ ಮೊರೆ ಹೋಗುತ್ತಿದ್ದಾರೆ. ಈ ಸ್ಪರ್ಧಾತ್ಮಕ ಹಾಗೂ ಒತ್ತಡ ಜೀವನ ಶೈಲಿಯಿಂದ ಹೊರಬರಲು ನಾವು ಕೆಲವು ಒಳ್ಳೆಯ ಹವ್ಯಾಸಗಳನ್ನು ಅಳವಡಿಸಿಕೊಳ್ಳಬೇಕು. ಅದರಲ್ಲಿ ಯೋಗಭ್ಯಾಸ ಹಾಗೂ ಪ್ರಾಣಾಯಾಮ ಒಂದು.

ಬೆಳಿಗ್ಗೆಯಿಂದ ಸಾಯಂಕಾಲದವರಿಗೂ ದುಡಿದು ದುಡಿದು ಸಮಯ ಸಾಲದಾಗಿದೆ. ಉಳಿದ ಕಾರ್ಯಕ್ರಮಗಳನ್ನು ಮಾಡಲು ಸಮಯ ಎಲ್ಲಿ ಸಿಗುತ್ತದೆ ? ಆದರೂ ಸಹ ಅದರಲ್ಲಿ ಸಮಯವನ್ನು ಉಳಿಸಿಕೊಂಡು ಈ ಹವ್ಯಾಸವನ್ನು ಬೆಳೆಸಿಕೊಳ್ಳಬೇಕು. ಇದರಿಂದ ಯಾವುದೇ ದುಡ್ಡು ಖರ್ಚಾಗುವುದಿಲ್ಲ. ಇದೊಂದು ಮನೆಯಲ್ಲಿ ಕುಳಿತು ಮಾಡಬಹುದಾದ ವ್ಯಾಯಾಮವಾಗಿದೆ.

ಯೋಗಾಭ್ಯಾಸ ಎಂದರೇನು ನಮ್ಮ ದೇಹಕ್ಕೆ ಒಂದು ರೀತಿಯಲ್ಲಿ ವ್ಯಾಯಾಮವನ್ನು ನೀಡುವ ವಿವಿಧ ಆಸನಗಳು. ಈ ಆಸನ ಮತ್ತು ಪ್ರಾಣಾಯಾಮವನ್ನು ಗುರುವಿನ ಮಾರ್ಗದರ್ಶನದಿಂದ ಕಲಿಯಬೇಕು. ಯೋಗಭ್ಯಾಸದಿಂದ ದೇಹದ ಎಲ್ಲಾ ಅಂಗಗಳಿಗೂ ಒಳ್ಳೆಯ ವ್ಯಾಯಾಮವಾಗುತ್ತದೆ. ಅದರಲ್ಲಿಯೂ ಸೂರ್ಯ ನಮಸ್ಕಾರ ಅತ್ಯಂತ ಶ್ರೇಷ್ಠವಾದದ್ದು. ಯಾವುದೋ ಜಿಮ್‌ನಲ್ಲಿ ಹಣ ಪಾವತಿಸಿ ವ್ಯಾಯಾಮ ಮಾಡುವುದಕ್ಕಿಂತಲೂ ಮನೆಯಲ್ಲಿ ಕುಳಿತು ಮಾಡುವ ಯೋಗಾಭ್ಯಾಸಗಳು ಬಹಳ ಶ್ರೇಷ್ಠ. ಸುಮಾರು ಏಳು ಎಂಟು ವರ್ಷ ಮೇಲ್ಪಟ್ಟವರಿಂದ ಹಿಡಿದು ಇದನ್ನು ಎಲ್ಲರೂ ಮಾಡಬಹುದು.

ಪ್ರಾಣಾಯಾಮ ಎಂದರೆ ಉಸಿರಿನ ಚಲನೆ. ಕ್ರಮಬದ್ಧವಾಗಿ ಉಸಿರಾಟ ಮಾಡುವುದನ್ನು ಪ್ರಾಣಾಯಾಮ ಎಂದು ಕರೆಯಬಹುದು. ಇದರಿಂದ ನಮ್ಮ ದೇಹದ ಒಳಗಿರುವ ಎಲ್ಲಾ ನರನಾಡಿಗಳಿಗೆ ಆಮ್ಲಜನಕ ದೊರೆಯುತ್ತದೆ. ಇದರಲ್ಲಿಯೂ ಹಲವಾರು ಪ್ರಕಾರಗಳಿಗೆ. ಮುಖ್ಯವಾಗಿ ಪತಂಜಲಿ ಯೋಗ ಅಭ್ಯಾಸ ಈಗ ಪ್ರಚಲಿತದಲ್ಲಿರುವ ಹಾಗೂ ಒಳ್ಳೆಯ ಪ್ರಾಣಾಯಾಮ ಎಂದು ಹೇಳಬಹುದು. ಉಸಿರನ್ನು ದೇಹದ ಒಳಗೆ ತೆಗೆದುಕೊಳ್ಳುವುದು, ಮತ್ತೆ ಉಸಿರನ್ನು ಹೊರಗೆ ಬಿಡುವುದು. ಇದರ ಮಧ್ಯ ಕೆಲವು ಪ್ರಾಣಾಯಾಮಗಳಲ್ಲಿ ಉಸಿರನ್ನು ತಡೆದು ನಿಲ್ಲಿಸುವ ಇರುತ್ತದೆ. ಇದನ್ನು ನಾವೇ ಕಲಿತುಕೊಳ್ಳಲು ಸಾಧ್ಯವಿಲ್ಲ. ಒಬ್ಬ ಸೂಕ್ತ ಗುರುವಿನ ಮಾರ್ಗದರ್ಶನದಲ್ಲಿ ಕನಿಷ್ಠ ಒಂದು ವಾರದ ತರಬೇತಿಯನ್ನು ಪಡೆದಾಗ ನಾವು ಪ್ರಾಣಾಯಾಮವನ್ನು ದಿನಂಪ್ರತಿ ಮಾಡಬಹುದು.

**ಪ್ರಯೋಜನಗಳು:** ಯೋಗಾಭ್ಯಾಸ ಹಾಗೂ ಪ್ರಾಣಾಯಾಮದಿಂದ ಹಲವಾರು ಪ್ರಯೋಜನಗಳಿದ್ದು ಅವುಗಳ ಬಗ್ಗೆ ತಿಳಿದುಕೊಳ್ಳೋಣ.

ಇವುಗಳನ್ನು ಬೆಳಿಗ್ಗೆ ಅಥವಾ ಸಾಯಂಕಾಲ ಸಮಯದಲ್ಲಿ ಮಾಡಬೇಕು

ಈ ವ್ಯಾಯಾಮಗಳನ್ನು ಮಾಡುವಾಗ ಹೊಟ್ಟೆ ಖಾಲಿ ಇರಬೇಕು.

ಊಟವಾದ ಕನಿಷ್ಠ ನಾಲ್ಕರಿಂದ ಐದು ಗಂಟೆ ನಂತರ ಇವುಗಳನ್ನು ಮಾಡಬಹುದು.

ಈ ಆಸನಗಳನ್ನು ಮಾಡುವ ಪೂರ್ವದಲ್ಲಿ ಸಾಕಷ್ಟು ನೀರನ್ನು ಕುಡಿದಿರಬೇಕು

ಮನೆಯಲ್ಲಿ ಮಾಡುತ್ತಿದ್ದಾರೆ ಗಾಳಿ ಬೆಳಕು ಬರುವಂತೆ ಕಿಟಕಿ ಬಾಗಿಲುಗಳನ್ನು ತೆರೆದಿರಬೇಕು

ನೆಲದ ಮೇಲೆ ಕುಳಿತು ಮಾಡುವವರು ಒಂದು ಹಾಸಿಗೆಯನ್ನು ಹರಿಸಿಕೊಂಡು ಕುಳಿತು ಆಸನಗಳನ್ನು ಮಾಡಬೇಕು

ನೆಲದ ಮೇಲೆ ಕೂಡಲು ಸಾಧ್ಯವಾಗದವರು ಕುರ್ಚಿಯ ಮೇಲೆ ಕುಳಿತು ಮಾಡಬಹುದು. ಅದರ ಮೇಲೆಯೂ ಒಂದು ಹಾಸಿಗೆಯನ್ನು ಹಾಸಿಕೊಂಡಿರಬೇಕು

**ಇವುಗಳಿಂದ ಕ್ರಮಬದ್ಧ ಉಸಿರಾಟ ದೊರೆಯುತ್ತದೆ**

**ಶ್ವಾಸಕೋಶಕ್ಕೆ ಸಂಬಂಧಪಟ್ಟ ರೋಗಗಳು ಕಡಿಮೆಯಾಗುತ್ತದೆ**

**ಕೆಮ್ಮು ನೆಗಡಿ ಗಂಟಲುಬೇನೆ ಅಲರ್ಜಿ ಇವೆಲ್ಲವೂ ಕಡಿಮೆಯಾಗುತ್ತವೆ**

**ಹೃದಯಕ್ಕೆ ಒಳ್ಳೆಯ ವ್ಯಾಯಾಮ ದೊರೆಯುತ್ತದೆ**

**ಬಿಪಿ, ಸಕ್ಕರೆ ರೋಗ ಇವು ಸಹಜ ಸ್ಥಿತಿಗೆ ಬರುತ್ತವೆ**

**ಮಂಡಿ ನೋವು ಕಡಿಮೆಯಾಗುತ್ತದೆ**

**ಮೈಗ್ರೇನ್ ತಲೆನೋವು ಕಡಿಮೆಯಾಗುತ್ತದೆ**

**ಮನಸ್ಸಿನ ಏಕಾಗ್ರತೆ ಉಂಟಾಗುತ್ತದೆ**

**ದಿನವಿಡೀ ಮನುಷ್ಯ ಉಲ್ಲಾಸದಿಂದ ಇರುತ್ತಾನೆ**

**ಊಟ ನಿದ್ದೆ ಸರಿಯಾಗಿ ಆಗುತ್ತದೆ**

**ಪಚನ ಕ್ರಿಯೆ ಉತ್ತಮಗೊಳ್ಳುತ್ತದೆ**

ಮನಸ್ಸಿನ ನಕಾರಾತ್ಮಕ ಆಲೋಚನೆಗಳು ದೂರವಾಗಿ ಸಕಾರಾತ್ಮಕ ಆಲೋಚನೆಗಳು ಬೆಳೆಯುತ್ತವೆ



ಹೀಗೆ ಯೋಗಾಭ್ಯಾಸ ಹಾಗೂ ಪ್ರಾಣಾಯಾಮದಿಂದ ಹಲವಾರು ಪ್ರಯೋಜನಗಳಿವೆ. ನಿತ್ಯ ಜೀವನದಲ್ಲಿ ಇವುಗಳನ್ನು ಅಳವಡಿಸಿಕೊಂಡು ಆರೋಗ್ಯವನ್ನು ಕಾಪಾಡಿಕೊಳ್ಳೋಣ.

– **ಪ್ರೊ. ಸಿದ್ದು ಸಾವಳಸಂಗ,** ತಾಜಪುರ




### ಐಕ್ಯ ಗಾನ ಮೊಳಗಲಿ




ದೇಶದ ಗುಡಿಯ ಮೇಲ್ಗಡೆ ಹಾರಿಸಿ
ರಾಷ್ಟ್ರದ ಧ್ವಜವನು – ಓ ಜನರೆ
ತಾಯಿಯ ಕರುಳಿನ ಕುಡಿಗಳು ನಾವು
ಎನುತಲಿ ಬಾಳಿರಿ – ಓ ಜನರೆ
ಸತ್ಯದ ನೆಲೆಯಲಿ ಶಾಂತಿಯ ಬದುಕಲಿ
ತ್ಯಾಗವ ಮಾಡಿರಿ – ಓ ಜನರೆ
ಭೇದವ ತೊರೆಯುತ ಐಕ್ಯದ ಗಾನದಿ
ಮುಂದಕೆ ನಡೆಯಿರಿ – ಓ ಜನರೆ
ಛಲವನು ಮುರಿಯದೆ ಸಾಹಸದಿಂದಲಿ
ಗುರಿಯನು ಮುಟ್ಟಿರಿ – ಓ ಜನರೆ
ಕಷ್ಟವು ಬಂದರು ನಷ್ಟವು ಬಂದರು
ಭಕ್ತಿಯ ಬಿಡದಿರಿ – ಓ ಜನರೆ
ಹಿರಿಯರ ನುಡಿಯನು ನಡತೆಯ ಗುಣವನು
ತುಂಬುತ ಸಾಗಿರಿ – ಓ ಜನರೆ
ಶಾಂತಿಯ ಬದುಕಲಿ ತತ್ವವ ಸಾರುತ
ಸೇವೆಯ ಗೈಯಿರಿ – ಓ ಜನರೆ
ಅಂಜದೆ ಅಳುಕದೆ ನಿಷ್ಠೆಯ ತೋರುತ
ದೇಶವ ಕಟ್ಟಿರಿ – ಓ ಜನರೆ
ದೇಶದ ಗುಡಿಯ ಮೇಲ್ಗಡೆ ಹಾರಿಸಿ
ರಾಷ್ಟ್ರದ ಧ್ವಜವನು – ಓ ಜನರೆ

– **ಹಾ ಮ ಸತೀಶ** ಬೆಂಗಳೂರು

# ಮುಪ್ಪನ್ನು ಮುಂದೂಡವಲ್ಲಿ ಸಫಲರಾದ ವಿಜ್ಞಾನಿಗಳು

ಮುಪ್ಪು ಯಾರಿಗೆ ತಾನೆ ಇಷ್ಟ? ಯಾವ ಕಾಲದಲ್ಲಿಯೂ ತಾರುಣ್ಯದಿಂದಲೇ ಇರಬೇಕೆಂಬ ಅಭಿಲಾಷೆ ಈ ಮಾನವನದ್ದು ಪೌರಾಣಿಕ ಕಾಲದಲ್ಲಿ ಮಂತ್ರಶಕ್ತಿಯಿಂದ ಮಾಯವಾಗುವುದು. ಮುದುಕ ಯುವಕನಾಗುವುದು, ಗಂಡು ಹೆಣ್ಣಾಗುವುದು ಸರ್ವಸಾಮಾನ್ಯ. ಇವೆಲ್ಲ ವೈಜ್ಞಾನಿಕವಾಗಿ ದೂರವಾದವುಗಳು. ಆದರೆ ವಾಸ್ತವವಾಗಿ ವೈಜ್ಞಾನಿಕವಾಗಿ ಸದಾ ತಾರುಣ್ಯದಲ್ಲಿಯೇ ಇರಬೇಕೆನ್ನುವುದು ವಿಜ್ಞಾನಕ್ಕೆ ಸಂಶೋಧನೆಗೆ ಬಿಟ್ಟ ವಿಷಯವಾಗಿದೆ. ಹಾಗೆ ನೋಡಿದರೆ ಕ್ಲೋನಿಂಗ್ ವಿಷಯ ಬಂದಾಗ ಮರುಸೃಷ್ಟಿ ಸಾಧ್ಯವೆಂದಾದರೂ ಈ ವಯಸ್ಸನ್ನು ಇಳಿಗೊಳಿಸದಿರುವುದು ಅಸಾಧ್ಯದ ಮಾತೆಂದು ಎಲ್ಲರೂ ಭಾವಿಸಿದ್ದರು. ಅಮೇರಿಕದ ಹೊಸ್ಟನ್ನಿನಲ್ಲಿ ಮಿಲ್ಲರ್ ಕ್ಯಾರ್ಲ್ಸ್ ಎಂಬ 81 ವರ್ಷ ವಯೋವೃದ್ಧ ಸದಾ ಯವ್ವನಾವಸ್ಥೆಯಲ್ಲಿಯೇ ಇರಬೇಕೆಂದು ಬಯಸಿ ತನ್ನ ಜೀವಿತಾವಧಿಯಲ್ಲಿಯೇ ಮುಪ್ಪನ್ನು ಬರದಿರುವಂತೆ ಮಾಡುವ ಸಂಶೋಧಕರಿಗೆ 1 ಲಕ್ಷ ಡಾಲರ್ ಬಹುಮಾನ ನೀಡುವುದಾಗಿ 1999 ರಲ್ಲಿ ಘೋಷಿಸಿದ ನಂತರ ಕ್ಯಾರ್ಲ್ಸ್ ಅವರ ಸತತ ಪ್ರಯತ್ನಗಳ ದೆಸೆಯಿಂದ ಹಲವಾರು ವಿಜ್ಞಾನಿಗಳು ರೇಗಾನ್ ಕಾರ್ಪೊರೇಶನ್ ಎಂಬ ವಿಜ್ಞಾನದ ಸಂಸ್ಥೆಯನ್ನು ಕಟ್ಟಿದರು. ಈ ಸಮಿತಿಯಲ್ಲಿ ಪ್ರಖ್ಯಾತ ವೈದ್ಯ ವಿಜ್ಞಾನಿಗಳು ಅಣು ಜೀವಿ ವಿಜ್ಞಾನಿಗಳು, ಪೋಷಕಾಂಶ ಪರಿಣಿತರು ವ್ಯಾಯಾಮ ಪಂಡಿತರು ಮುಂತಾದ ವಿವಿಧ ಕ್ಷೇತ್ರಗಳ 1,000 ಕ್ಕೂ ಹೆಚ್ಚು ಜನ ವೃದ್ಧಾಪ್ಯವನ್ನು ಹಿಮ್ಮೆಟ್ಟಿಸುವ ಸಂಶೋಧನೆಯಲ್ಲಿ ತೊಡಗಿದರು. ಕೊನೆಗೊಂದು ದಿನ ಫ್ರಾನ್ಸಿನ ಕ್ರಿಸ್ ಜತೆಗೂಡಿ ಡಿ.ಎನ್.ಎ. ಅಣು ವಿನ್ಯಾಸ ಪತ್ತೆಮಾಡಿದ ನೊಬೆಲ್ ಪ್ರಶಸ್ತಿ ವಿಜೇತ ವಿಜ್ಞಾನಿ ಡಾ ಜೇಮ್ಸ್ ವಾಟ್ಸನ್ ಸಲಹಾ ಮಂಡಲಯಲ್ಲಿರುವ ಗೇರಾನ್ ಕಾರ್ಪೋರೇಶನ್ನಿನ ಪ್ರತಿಭಾವಂತ ವಿಜ್ಞಾನಿ ಡಾ ಮೈಕ್ ವೆಸ್ಟ್ ವೃದ್ಧಾಪ್ಯಕ್ಕೆ ಸಂಬಂಧಿಸಿದ ಅತ್ಯಂತ ಮಹತ್ವದ ಅನ್ವೇಷಣೆಯ ಬಗೆಗೆ ಬೆಳಕು ಚಲ್ಲಿದರು. ನಮ್ಮ ದೇಹದಲ್ಲಿ 100 ಟ್ರಿಲಿಯನ್ ಜೀವಕೋಶಗಳಿದ್ದು ಈ ಜೀವಕೋಶಗಳು ಅಮರವಾದರೆ ನಮ್ಮದೇಹವು ಅಮರವಾಗುತ್ತದೆ. ಈ ಜೀವಿಕೋಶಗಳ ಅಮರತ್ವವನ್ನು ಹೆಫ್ಲಿಕ್ ಮಿತಿ ಎಂಬ ಸರಳ ನಿಯಮವೊಂದು ರೂಪಿಸುತ್ತದೆ.

ನಮ್ಮ ದೇಹದ ಅಂಗಾಂಗಗಳಿಂದ ತೆಗೆದ ಜೀವಕೋಶಗಳನ್ನು ಪ್ರಯೋಗ ಶಾಲೆಯಲ್ಲಿ ಬೆಳಸಿದಾಗ ಅವು ಸು. 50 ಬಾರಿ ವಿಭಜನೆಯಾಗುತ್ತವೆ. ಈ ಮಿತಿ ಅಂಗಾಂಶಗಳನ್ನು ಆಧರಿಸಿ ಬದಲಾಗುತ್ತದೆ. ಈ ಮಿತಿಯನ್ನು ದಾಟಿದ ನಂತರ ಕೋಶವಿಭಜನೆ ನಿಂತು ಜೀವಕೋಶಗಳಿಗೆ ಮುಪ್ಪು ಬರುತ್ತದೆ. ಈ ನಿಯಮವನ್ನು ಪ್ರತಿಪಾದಿಸಿದ ಕ್ಯಾಲಿಫೋರ್ನಿಯಾದ ವಿ.ವಿ.ಯ ವಿಜ್ಞಾನಿ ಡಾ ಹೆಫ್ಲಿಕ್ ಹೇಳುವಂತೆ ಜೀವಕೋಶದಲ್ಲಿರುವ ಡಿ.ಎನ್.ಎ. ಸರಪಳಿಯಲ್ಲಿ ಟೆಲೋಮಿರ್ ಎಂಬ ಭಾಗವಿದೆ. ಷುಲೇಸ್ನ ಎರಡೂ ತುದಿಯಲ್ಲಿರುವ ಪ್ಲಾಸ್ಟಿಕ್ ಕವಚದಂತಿರುವ ಟೆಲೋಮಿರ್ ಭಾಗದ ಉದ್ದ ಪ್ರತಿಭಾರಿ ಜೀವಕೋಶ ವಿಭಜನೆಗೊಂಡಾಗಲೂ ಕಡಿಮೆಯಾಗುತ್ತದೆ. ಈ ಉದ್ದ ಒಂದು ನಿರ್ದಿಷ್ಟ ಮಿತಿಗೆ ಬಂದ ಕೂಡಲೇ ವಿಭಜನೆ ನಿಲ್ಲುತ್ತದೆ. ಟೆಲೋಮಿರನ ಉದ್ದಕ್ಕೂ ಜೀವಕೋಶಗಳ ಸಾವಿಗೂ ಖಚಿತವಾದ ಸಂಬಂಧವಿರುವುದು ಈಗ ಸ್ಪಷ್ಟವಾಗಿದೆ. ಎಲ್ಲ ಜೀವಕೋಶಗಳಲ್ಲಿಯೂ ಟೆಲೋಮಿರೇಟ್ ಎಂಬ ವಂಶವಾಹಿ ಇದ್ದು ಇದು ಟೆಮಿಮಿರ್ ಭಾಗದ ಉದ್ದವನ್ನು ಮತ್ತೊಮ್ಮೆ ಮೊದಲಿನಂತೆ ಮಾಡಿ ಮುಪ್ಪಡರಿದ ಜೀವಕೋಶಗಳನ್ನು ಹಿಂದಿನ ಯೌವ್ವನಾವ್ಯವಸ್ಥೆಗೆ ತರಬಲ್ಲದು.



ಡಾ ಹೆಸ್ಕ್ ಅವರೊಂದಿಗೆ ಸಂಶೋಧನೆಯಲ್ಲಿ ನಿರತರಾಗಿರುವ ಡಾ ವುಡ್‌ರಿಂಗ್ ರೈಟ್ ಮತ್ತು ಡಾ ಚೆರಿಶೇ ಅವರುಗಳು ಈದೀಗ ಈ ಸುಪ್ತವಾದ ಜಡಾವಸ್ಥೆಯ ವಂಶವಾಹಿನಿಯನ್ನು ಇನ್ನಿತರ ಜೀವಕೋಶಗಳಲ್ಲಿ ಸೇರಿಸಿ ಆ ಜೀವಕೋಶಗಳು ಹೆಫ್ಲಿಕ್, ಮಿತಿಯನ್ನು ದಾಟಿ ನಿರಂತವಾಗಿ ವಿಭಜನೆಯಾಗುವಂತೆ ಮಾಡಲಾಗಿದೆ. ಸಾವಿನ ಅಂಚಿಗೆ ಬಂದಿದ್ದ ಅಂಗಾಂಶವೊಂದರ ಜೀವಕೋಶಗಳನ್ನು ಮತ್ತೊಮ್ಮೆ ಹಿಂದಿನ ಯೌವನವಸ್ಥೆಗೆ ತರುವಲ್ಲಿ ಈ ತಂಡ ಸಂಪೂರ್ಣದಾಗಿ ಯಶಸ್ವಿಯಾಗಿದೆ. ಜೀವಕೋಶದ ಹಂತದಲ್ಲಿ ಇಂದು ಸಾಧ್ಯವಾಗಿರುವ ಅಮರತ್ವ ಮುಂದೆ ಜೀವಿಯ ಮಟ್ಟದಲ್ಲೂ ಸಾಧ್ಯವಾಗಬಹುದು.



# ಕೃಷ್ಣನ ಕೈಯಲ್ಲಿ ಕೊಳಲಾದ ಬಿದಿರು

ಅನೇಕ ದಂತ ಕಥೆಗಳಲ್ಲಿ ಕೃಷ್ಣನ ಕೈಗೆ ಬಂದ ಕೊಳಲಿನ ಮತ್ತೊಂದು ಕಥೆ ಇದು. ಒಮ್ಮೆ ಕೃಷ್ಣ ಬಿದಿರಿನ ಗಿಡದ ಬಳಿಗೆ ಹೋದನು. ಸೂಕ್ಷ್ಮವಾಗಿದ್ದ ಬಿದಿರಿನ ಗಿಡವು ಕೃಷ್ಣನ ಪ್ರೀತಿಯ ಆಗಮನವನ್ನು ಅರಿತು ಅವನನ್ನು ನೋಡಿ ಮುಗುಳ್ನಕ್ಕಿತು. ಕೃಷ್ಣನು ಬಿದಿರಿನಿಂದ ತನಗೊಂದು ಕೊಳಲನ್ನು ಮಾಡಿಕೊಳ್ಳುವ ಆಸೆಯನ್ನು ಹೇಳಿದನು. ಆದರೆ ಅದಕ್ಕಾಗಿ ನಾನು ನಿನ್ನನ್ನು ಕತ್ತರಿಸಿ ನಿನ್ನಲ್ಲಿ ರಂಧ್ರಗಳನ್ನು ಕೊರೆಯ ಬೇಕಾಗುತ್ತದೆ. ನಿನಗೆ ಅದರಿಂದ ನೋವಾಗ ಬಹುದು. ನಿನಗೆ ಸಮ್ಮತವೇ? ಎಂದು ಕೇಳಿದನು.

ಬಿದಿರಿನ ಗಿಡವು ಸದಾ ತನ್ನ ಬಗ್ಗೆ ತಾನು ಕೀಳರಮೆಯಿಂದ ಬೇಸರಪಟ್ಟುಕೊಳ್ಳುತ್ತಿತ್ತು. ನನ್ನಲ್ಲಿ ಹೂವಿಲ್ಲ ಹಣ್ಣಿಲ್ಲ, ನನ್ನ ನೆರಳಿಗೂ ಕೂಡ ಯಾರು ನಿಲ್ಲುವುದಿಲ್ಲ, ನಾನು ಯಾರಿಗೂ ಬೇಡವಾದವಳು ಎಂದು. ಆದರೆ ಕೃಷ್ಣನ ಈ ಆಸೆ ಕೇಳಿ ಬಿದಿರಿಗೆ ಮಹದಾನಂದವಾಯಿತು.

ನಗುತಾ ತನ್ನನ್ನು ತಾನೇ ಕೃಷ್ಣನಿಗೆ ಅರ್ಪಿಸಿಕೊಂಡಿತು. ಓ ಕೃಷ್ಣ, ನನ್ನನ್ನು ನಿನಗೆ ಅರ್ಪಿಸಿ ಕೊಂಡು ನಿನ್ನ ಕೈಯಲ್ಲಿ ಕೊಳಲಾಗುವುದು ನನ್ನ ಸೌಭಾಗ್ಯ. ದಯವಿಟ್ಟು ಮತ್ತು ನನ್ನನ್ನು ಕತ್ತರಿಸು ಎಂದು ಆನಂದದಿಂದ ನುಡಿಯಿತು. ಕೃಷ್ಣನು ಬಿದಿರನ್ನು ಕತ್ತರಿಸಿ ಅದರಲ್ಲಿ ಎಚ್ಚರಿಕೆಯಿಂದ ರಂಧ್ರಗಳನ್ನು ಮಾಡಿದನು. ನಂತರ ಉಜ್ಜಲು ಪ್ರಾರಂಭಿಸಿದನು, ಅಂಚುಗಳನ್ನು ಸಪೂರ ಗೊಳಿಸಿದನು ಒಳಭಾಗವನ್ನು ಸುಗಮಗೊಳಿಸಿದನು.

ಇವೆಲ್ಲ ಪ್ರಕ್ರಿಯೆ ಬಿದಿರಿಗೆ ಬಹಳ ನೋವು ಉಂಟು ಮಾಡಿತು. ಆದರೆ ಕೃಷ್ಣನ ಬೆರಳುಗಳು ಬಿದಿರಿನ ಮೇಲೆ ಕೌಶಲ್ಯದಿಂದ ಚಲಿಸಿ ಅದಕ್ಕೆ ಆಕಾರ ಮತ್ತು ಸೌಂದರ್ಯವನ್ನು ನೀಡುತ್ತಿದ್ದಂತೆ, ನೋವು ಆನಂದವಾಗಿ ರೂಪಾಂತರಗೊಂಡಂತೆ ತೋರಿತು.

ಕೃಷ್ಣನು ಬಿದಿರಿನಿಂದ ಸುಂದರವಾದ ಕೊಳಲನ್ನು ಮಾಡಿ ಅದರೊಳಗೆ ಉಸಿರನ್ನು ಊದಿದನು. ಕೃಷ್ಣನ ಉಸಿರು ತಾಕಿದೊಡನೆ ಬಿದಿರಿಗೆ ಹೊಸ ಜೀವ ಬಂದಂತೆ ನಲಿದಾಡಿತು. ಮೊದಲ ಸ್ವರವು ಕೊಳಲಿನಿಂದ ಹೊರಹೊಮ್ಮಿತು, ಕೃಷ್ಣನ ಪ್ರೀತಿಯ ಆಲಾಪಗಳು ಕೊಳಲ ಧ್ವನಿಯಾಗಿ ಅಲೆ ಅಲೆಯಾಗಿ ಹೊರ ಹೊಮ್ಮುತ್ತಾ ಕೇಳುಗರನ್ನೆಲ್ಲಾ ರೋಮಾಂಚನಗೊಳಿಸಿತು.

ಯಾರಿಗೂ ಬೇಡದ ಬಿದಿರು ಈಗ ಕೃಷ್ಣನ ಪ್ರೀತಿಯ ಕೊಳಲಾಗಿ ಸದಾ ಕೃಷ್ಣನೊಂದಿಗೆ ಇರುತ್ತಿತ್ತು. ತನ್ನೊಳಗೆ ಸಂತೋಷ ಉಕ್ಕಿದಾಗೆಲ್ಲ, ಕೃಷ್ಣ ಕೊಳಲನ್ನು ಎತ್ತಿಕೊಂಡು ನುಡಿಸುತ್ತಿದ್ದ ಅವನ ಕೊಳಲಿನ ಸ್ವರಗಳು ಕೇಳುವ ಎಲ್ಲರ ಹೃದಯಗಳನ್ನು ಶುದ್ಧ ಪ್ರೀತಿ ಮತ್ತು ತೀವ್ರವಾದ ಆನಂದದಿಂದ ತುಂಬುತ್ತಿದ್ದವು.

ಸದಾ ಕೃಷ್ಣನ ಕೈಯಲ್ಲಿ ನಲಿದಾಡುತ್ತಿದ್ದ ಅವನ ಉಸಿರಿನಲ್ಲಿ ಉಸಿರಾಗುತ್ತಿದ್ದ ಕೊಳಲಿನ ಬಗ್ಗೆ ಗೋಪಿಕೆಯರಿಗೆಲ್ಲ ಅಸೂಯೆ ಹುಟ್ಟಿತು. ನಾನೂ ಕೃಷ್ಣನ ಕೈಯ ಕೊಡಲಾಗಿದ್ದರೆ ಎಷ್ಟು ಚೆಂದ ಎಂದು ಪ್ರತಿ ಗೋಪಿಕೆಯೂ ವಿಷಾದದಿಂದ ಯೋಚಿಸುತ್ತಿದ್ದಳು. ಗೋಪಿಕೆಯರು ಕೊಳಲನ್ನು ಉದ್ದೇಶಿಸಿ ಕೃಷ್ಣ ನಮ್ಮ ಪ್ರಭು ಮತ್ತು ಗುರು, ನಮ್ಮ ಸ್ನೇಹಿತ ಮತ್ತು ಪ್ರಿಯ ಸಖ. ಆದರೂ ಅವನು ನಮ್ಮೊಂದಿಗೆ ಹೆಚ್ಚು ಸಮಯ ಕಳೆಯಲು ಸಾಧ್ಯವಿಲ್ಲ.

ಆದರೆ ನೀನು ಸದಾ ಅವನೊಂದಿಗೆ ಇರುತ್ತೀಯ. ಇದು ಹೇಗೆ ಸಾಧ್ಯ? ಎಂದಾಗ, ಕೊಳಲು ಸರಳವಾಗಿ ಮತ್ತು ಸ್ಪಷ್ಟವಾಗಿ ಉತ್ತರಿಸಿತು, ನಾನು ಒಳಗೆ ಖಾಲಿಯಾಗಿದ್ದೇನೆ. ನನ್ನ ಬಗ್ಗೆ ಯಾವುದೇ ಅಹಂಕಾರ ನನ್ನಲ್ಲಿ ಇಲ್ಲ. ನಾನು ಕೃಷ್ಣನ ಕೈಯಲ್ಲಿ ಇರುವ ಅವನ ಕೊಳಲಷ್ಟೇ, ಅವನು ನನ್ನೊಂದಿಗೆ ಅವನಿಗೆ ಇಷ್ಟವಾದಂತೆ ಮಾಡಲು, ನನ್ನನ್ನು ಉಳಿಸಿಕೊಳ್ಳಲು, ನನ್ನನ್ನು ದೂರ ಎಸೆಯಲು, ನನ್ನನ್ನು ಬದಲಾಯಿಸಲು, ನನ್ನನ್ನು ಮರುರೂಪಿಸಲು ಸರ್ವಸ್ವತಂತ್ರ.

ನಾನು ಎಂದಿಗೂ ಪ್ರಶ್ನಿಸುವುದಿಲ್ಲ. ಸಂಪೂರ್ಣ ಸಮರ್ಪಣಾ ಭಾವದಿಂದ ನನ್ನನ್ನು ನಾನು ಕೃಷ್ಣನಿಗೆ ಅರ್ಪಿಸಿಕೊಂಡಿದ್ದೇನೆ. ಹೀಗಾಗಿ ನನಗೆ ಈ ಪುಣ್ಯ ಲಭಿಸಿದೆ ಎಂದಿತು. ಈ ರೀತಿಯ ಸಮರ್ಪಣಾ ಭಾವ, ನಂಬಿಕೆ ವಿಶ್ವಾಸ ನಮಗೆ ಯಾವುದೇ ಸಂಬಂಧದಲ್ಲಿ ಇದ್ದಾಗಲೂ ಸಹ ಅಲ್ಲಿ ಒಂದು ಸುಂದರವಾದ ಬಾಂಧವ್ಯ ಬೆಸೆದುಕೊಳ್ಳುತ್ತದೆ.

ನಾವೆಲ್ಲರೂ ಭಗವಂತನನ್ನು ಭಕ್ತಿಯಿಂದ ಕಾಣುತ್ತೇವೆ. ಆದರೆ ಸಂಪೂರ್ಣವಾಗಿ ನಮ್ಮನ್ನು ಅವನಿಗೆ ಸಮರ್ಪಿಸಿ ಕೊಂಡಾಗ ಮಾತ್ರ, ಒಂದು ಸಮಾಧಾನದ ಸ್ಥಿತಿಯಲ್ಲಿ ಬರುವ ಕಷ್ಟಗಳನ್ನೆಲ್ಲ ಅವನಿಗೆ ಸಮರ್ಪಿಸಿ ಸ್ಥಿತ ಪ್ರಜ್ಞತೆಯಿಂದ ಬದುಕಲು ಸಾಧ್ಯ. ಕೃಷ್ಣಂ ವಂದೇ ಜಗದ್ಗುರುಂ. ಸರ್ವೇ ಜನಾ ಸುಖಿನೋ ಭವಂತು.

– **ರೂಪಾ** ಗುರುರಾಜ್

